# ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌವ್ಹಾಣ್

ಬಿ.ಎನ್. ಶ್ರೀನಿವಾಸ -ವಿರುದ್ಧ-ಕಾರ್ಯದರ್ಶಿ, ಕರ್ನಾಟಕ ರಾಜ್ಯ (ನಗರಾಭಿವೃದ್ಧಿ ಇಲಾಖೆ) ಮತ್ತು ಇತರರು

ರಿಟ್ ಅರ್ಜಿ ಸಂ. 12419/2017 (ಎಲ್ಬಿ-ಇಎಲ್ಇ), ದಿನಾಂಕ 23 ನೇ ಮಾರ್ಚ್, 2017

ಆಜ್ಞೆ

ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌವ್ಹಾಣ್:

ಅರ್ಜಿದಾರ ಶ್ರೀ ಬಿ.ಎನ್. ಶ್ರೀನಿವಾಸ್, ಇವರು ದಿನಾಂಕ 13.03.2017 ರಂದು ಪ್ರತ್ಯರ್ಜಿದಾರ ಸಂ .1 ಆಗಿರುವ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ, ಕಾರ್ಯದರ್ಶಿ, ನಗರಾಭಿದ್ದಿ ಇಲಾಖೆ ಇವರು ಜಾರಿಮಾಡಿದ ಅಧಿಸೂಚನೆಯ ಕಾನೂನು ಸಮ್ಮತೆತೆಯನ್ನು ಆಕ್ಷೇಪಿಸಿ ಮತ್ತು ಪ್ರತ್ಯರ್ಜಿದಾರ ಸಂ .3 ಆಗಿರುವ ವಿಭಾಗೀಯ ಆಯುಕ್ತರು, ಚಿಕ್ಕಬಳ್ಳಾಪುರ ಇವರು ದಿನಾಂಕ 15.03.2017 ರಂದು ಜಾರಿಮಾಡಿದ ಚುನಾವಣಾ ನೋಟಿಸನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿ ಇದಾಗಿದೆ.ರಿಟ್ ಅರ್ಜಿಯಲ್ಲಿ ಅರ್ಜಿದಾರರು, ಪ್ರತ್ಯರ್ಜಿದಾರರಿಗೆ ಈ ಸಂಬಂಧದಲ್ಲಿ ಮೊದಲು ಹೊಸ ತಾತ್ಕಾಲಿಕ ಅಧಿಸೂಚನೆಯನ್ನು ಜಾರಿಮಾಡುವುದಕ್ಕೆ ಮತ್ತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ ಮಾತ್ರವೇ ನಿರ್ದಿಷ್ಟ ಪ್ರವರ್ಗಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯನ್ನು ಮೀಸಲುಗೊಳಿಸಿರುವ ಬಗ್ಗೆ ಅಂತಿಮ ೧ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ನಿರ್ದೇಶಿಸಲು ರಿಟ್ ಅರ್ಜಿಯಲ್ಲಿ ನ್ಯಾಯಾಲಯವನ್ನು ಪ್ರಾರ್ಥಿಸಿರುವರು.

2. ನಗರಸಭೆ, ಬಾಗೇಪಲ್ಲಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದ ಮೊಕದ್ದಮೆ ಇದಾಗಿದೆ.ಸದರಿ ಹುದ್ದೆಗೆ ನಡೆಸಿದ ಚುನಾವಣೆಯ ಇತಿಹಾಸವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿಗಳು ಕಂಡುಬರುತ್ತದೆ:ಅರ್ಜಿದಾರರು ವಾರ್ಡ್ ಸಂ .19 ರಿಂದ ದಿನಾಂಕ 11.03.2013 ರಂದು ನಡೆದ ಚುನಾವಣೆಯಲ್ಲಿ ಗೆದ್ದನಂತರದಲ್ಲಿ ಸದರಿ ನಗರಸಭೆಯ ಸದಸ್ಯರಾಗಿರುವರು.ರಾಜ್ಯ ಸರ್ಕಾರ ದಿನಾಂಕ 24.04.2016 ರಂದು ಅಧಿಸೂಚನೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗೆ ಚುನಾವಣೆ ನಡೆಸುವುದಕ್ಕೆ ಆದೇಶವನ್ನು ಹೊರಡಿಸಿದೆ.ಸದರಿ ಅಧಿಸೂಚನೆಗೆ ಅನುಸಾರವಾಗಿ ಅಧ್ಯಕ್ಷ ಹುದ್ದೆಯನ್ನು ಸಾಮಾನ್ಯ ಪ್ರವರ್ಗಕ್ಕೆ ಮೀಸಲಾಗಿಸಿದೆ ಉಪಾಧ್ಯಕ್ಷ ಹುದ್ದೆಯನ್ನು ಹಿಂದುಳಿದ ವರ್ಗದ (ಮಹಿಳೆ) ಪ್ರವರ್ಗಕ್ಕೆ ಮೀಸಲಾಗಿದೆ.(ಇನ್ನು ಮುಂದೆ ಬಿಸಿಬಿ (ಮ) ಎಂದು ಉಲ್ಲೇಖಿಸಲಾಗಿದೆ) ಆದಾಗ್ಯೂ, ಸದರಿ ಅಧಿಸೂಚನೆಯನ್ನು ಈ ನ್ಯಾಯಾಲಯದ ಮುಂದೆ ಶ್ರೀಮತಿ ವಿ. ವನಜಾ ಎನ್ನುವವರು ರಿಟ್ ಅರ್ಜಿಸಂಖ್ಯೆ: 41101/2016 ರನ್ನು ದಾಖಲಿಸುವ ಮೂಲಕ ಸದರಿ ಅಧಿಸೂಚನೆಯನ್ನು ಪ್ರಶ್ನಿಸಿರುವರು.

ಸದರಿ ರಿಟ್ ಅರ್ಜಿಯು ಇತ್ಯರ್ಥದಲ್ಲಿರುವಾಗಲೇ ದಿನಾಂಕ 04.03.2016 ರಂದು ಹೊಸದಾದ ಅಧಿಸೂಚನೆಯನ್ನು ಹೊರಡಿಸಲಾಗಿದೆ.ಅದರಲ್ಲಿ ಅಧ್ಯಕ್ಷ ಹುದ್ದೆಯನ್ನು ಸಾಮಾನ್ಯ ಮಹಿಳೆ ಪ್ರವರ್ಗಕ್ಕೆ ಮೀಸಲಾಗಿಸಿದೆ ಎಂದು ಘೋಷಿಸಲಾಗಿದೆ.ಸದರಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಅಧ್ಯಕ್ಷ ಹುದ್ದೆಯ ಮೀಸಲಾತಿಯನ್ನು ಸಾಮಾನ್ಯ ಪ್ರವರ್ಗದಿಂದ ಸಾಮಾನ್ಯ ಮಹಿಳೆ ಪ್ರವರ್ಗಕ್ಕೆ ಬದಲಾಯಿಸಿದುದರಿಂದ ಬಾಧಿತರಾಗಿ ಪ್ರಸ್ತುತ ಈ ನ್ಯಾಯಾಲಯದಲ್ಲಿ ರಿಟ್ ಅರ್ಜಿಸಂಖ್ಯೆ: 47135/2016 ಅನ್ನು ದಾಖಲಿಸಿರುವರು.

ಅಲ್ಲದೆ, ಶ್ರೀಮತಿ ವಿ. ವನಜಾ ಅವರು ದಾಖಲಿಸಿದ ಅರ್ಜಿಯನ್ನು ನಿರ್ಣಯಿಸಿದಿನಾಂಕ: 29.08.2016 ರಂದು ಈ ನ್ಯಾಯಾಲಯದ ಮಾನ್ಯ ಏಕ ನ್ಯಾಯಾಧೀಶರ ಪೀಠವು ಆದೇಶವನ್ನು ಹೊರಡಿಸಿರುತ್ತದೆ.ಮಾನ್ಯ ಏಕ ನ್ಯಾಯಾಧೀಶ ಪೀಠವುದಿನಾಂಕ: 24.02.2016 ರ ಅಧಿಸೂಚನೆಯನ್ನು ವಜಾಗೊಳಿಸಿರುತ್ತದೆ ಮತ್ತು ಪ್ರತ್ಯರ್ಜಿದಾರರಿಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಯನ್ನು ಅನುಸೂಚಿತ ಜಾತಿ ಮಹಿಳೆಗೆ ಮೀಸಲಿಡಬೇಕೆಂದು ಮತ್ತು ಅಧಿಸೂಚನೆಯನ್ನು ಮತ್ತೆ ಹೊರಡಿಸಬೇಕೆಂದು ನಿರ್ದೇಶಿಸಿದೆ.

ಹಾಲಿ ಅರ್ಜಿದಾರರು, ದಿನಾಂಕ 04.03.2016 ರ ಅಧಿಸೂಚನೆಯನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿಯನ್ನು 15.09.2016 ರಂದು ಮಾನ್ಯ ಏಕ ನ್ಯಾಯಾಧೀಶರು ನೀಡಿದ ಸದರಿ ನಿರ್ದೇಶನದಿಂದ ಅರ್ಜಿದಾರರು ತಾವು

ಸಲ್ಲಿಸಿದ ರಿಟ್ ಅರ್ಜಿಯನ್ನು ಹಿಂದಕ್ಕೆ ಪಡೆದಿದ್ದಾರೆ.ಹಾಲಿ ಅರ್ಜಿದಾರರಾದ ಶ್ರೀ ಬಿ.ಎನ್. ಶ್ರೀನಿವಾಸ ಅವರು ಶ್ರೀಮತಿ ವನಜಾರವರು ದಾಖಲಿಸಿದ ಮೊಕದ್ದಮೆಯಲ್ಲಿ ಪ್ರತ್ಯರ್ಜಿದಾರರಾಗಿದ್ದರು.ಹಾಲಿ ಅರ್ಜಿದಾರರು, ದಿನಾಂಕ 29.08.2016 ರಂದು ಹೊರಡಿಸಿದ ಆದೇಶದ ವಿರುದ್ಧ ರಿ.ಅ.ಸಂ .3699/2016 ನ್ನು ದಾಖಲಿಸಿರುವರು.

3. ರಾಜ್ಯ ಸರ್ಕಾರವು ರಿಟ್ ಅಪೀಲು ಇತ್ಯರ್ಥದಲ್ಲಿರುವ ಕಾಲಾವಧಿಯಲ್ಲಿ, ಮತ್ತು 27.10.2016 ರಂದು ಮಾನ್ಯ ಏಕ ನ್ಯಾಯಾಧೀಶರ ಪೀಠವು ಜಾರಿಮಾಡಿದ ನಿರ್ದೇಶನಗಳನ್ನು ಬಾಗೇಪಲ್ಲಿ ನಗರ ಸಭೆಯ ಸಂಬಂಧದಲ್ಲಿ ಹೊಸ ಅಧಿಸೂಚನೆಯಲ್ಲಿ ಪ್ರಕಟಿಸಿದೆ.ಸದರಿ ಅಧಿಸೂಚನೆಗನುಸಾರವಾಗಿ ಅಧ್ಯಕ್ಷ ಹುದ್ದೆಯಲ್ಲಿ ` ಸಾಮಾನ್ಯ ವರ್ಗದ ಮಹಿಳೆ'ಯನ್ನು ಮುಂದುವರೆಸಿದೆ.ಉಪಾಧ್ಯಕ್ಷ ಹುದ್ದೆಯನ್ನು ಅನುಸೂಚಿತ ಜಾತಿ ಮಹಿಳೆಯ ಪುವರ್ಗಕ್ಕೆ ಮೀಸಲುಗೊಳಿಸಿದೆ.

4. ಹಾಲಿ ಅರ್ಜಿದಾರರು ದಾಖಲಿಸಿದ ರಿಟ್ ಅಪೀಲು ಅರ್ಜಿಯನ್ನು ಮಾನ್ಯ ವಿಭಾಗೀಯ ಪೀಠವು ದಿನಾಂಕ 13.01.2017 ರಂದು ಪುರಸ್ಕರಿಸಿದೆ ಮತ್ತು ಮಾನ್ಯ ಏಕ ನ್ಯಾಯಾಧೀಶ ಪೀಠವು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯನ್ನು ಅನುಸೂಚಿತ ಜಾತಿ ಮಹಿಳೆಯ ಪವರ್ಗಕ್ಕೆ ಮೀಸಲಿಟ್ಟು ಹೊರಡಿಸಿದ ನಿರ್ದೇಶನವು ವಿವಾದವನ್ನು ಹೊಂದಿಲ್ಲವೆಂದು ನಿರ್ಣಯಿಸಿದೆ.ಅದು ಮತ್ತಷ್ಟು ಮುಂದುವರೆದು, ಸಂಬಂಧಪಟ್ಟ ಪ್ರಾಧಿಕಾರವು ' ಈ ವಸ್ತು ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಬೇಕೆಂದು ಮತ್ತು ಕಾನೂನಿಗನುಸಾರವಾಗಿ ಅಧಿಸೂಚನೆಯನ್ನು ಜಾರಿ ಮಾಡಬೇಕೆಂದು ” ನಿರ್ದೇಶಿಸಿದೆ.

5. ಅರ್ಜಿದಾರರು, ದಿನಾಂಕ 27.10.2016 ರ ಹೊಸ ಅಧಿಸೂಚನೆಯಿಂದಲೂ ಸಹ ಬಾಧಿತರಾಗಿರುವರು, ರಿಟ್ ಅಪೀಲು ಇತ್ಯರ್ಥದಲ್ಲಿರುವ ಕಾಲದಲ್ಲಿಯೇ ಹೊಸ ಅಧಿಸೂಚನೆಯನ್ನು ಜಾರಿ ಮಾಡಿರುವುದರಿಂದ ಬಾಧಿತರಾದ ಅರ್ಜಿದಾರರು ರಿಟ್ ಅರ್ಜಿಯನ್ನು ರಿ.ಅ.ಸಂ .56091/2016 ನ್ನು ದಾಖಲಿಸುವ ಮೂಲಕ ಅದನ್ನು ಪ್ರಶ್ನಿಸಿರುವರು.ಸದರಿ ರಿಟ್ ಅರ್ಜಿಯೂ ಈ ನ್ಯಾಯಾಲಯದ ಮುಂದೆ 13.02.2017 ರಂದು ಪಟ್ಟಿಯಾಗಿದೆ.ಈ ನ್ಯಾಯಾಲಯ ದಿನಾಂಕ 13.02.2017 ರಂದು ಪ್ರತ್ಯರ್ಜಿದಾರರಿಗೆ ಮಾನ್ಯ ವಿಭಾಗೀಯ ಪೀಠವು ಹೊರಡಿಸಿದ ನಿರ್ದೇಶನಗಳನ್ನು ಎಂದರೆ, “ ಕಾನೂನಿಗನುಸಾರವಾಗಿ ಹೊಸ ಅಧಿಸೂಚನೆಯನ್ನು ಜಾರಿಮಾಡುವುದಕ್ಕೆ ” ಈ ನಿರ್ದೇಶನವನ್ನು ಪಾಲಿಸುವುದಕ್ಕೆ ನಿರ್ದೇಶಿಸಿದೆ.ಪರಿಣಾಮವಾಗಿ, ಪ್ರತ್ಯರ್ಜಿದಾರರು ದಿನಾಂಕ 13.03.2017 ರಂದು ಅಧಿಸೂಚನೆಯನ್ನು ಹೊರಡಿಸಿರುವರು, ಅದರಲ್ಲಿ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳಾ ಪುವರ್ಗಕ್ಕೆ ಮೀಸಲಾಗಿಟ್ಟಿದೆ.ಆದರೆ ಉಪಾಧ್ಯಕ್ಷರ ಸ್ಥಾನಕ್ಕೆ 66 ” ಹಿ ೦ ದುಳಿದ ವರ್ಗಗಳ-ಎ'ಪ್ರುವರ್ಗಕ್ಕೆ ಮೀಸಲಾಗಿಟ್ಟಿರುವುದನ್ನು ಕಾಣುತ್ತೇವೆ.ಆದುದರಿಂದ ಹಾಲಿ ಅರ್ಜಿದಾರರು ದಿನಾಂಕ 13.03.2017 ಅಧಿಸೂಚನೆಯನ್ನು ಪ್ರಶ್ನಿಸಿ ಅರ್ಜಿಯನ್ನು ದಾಖಲಿಸಿರುವರು.

6. ಶ್ರೀ ಶ್ರೀನಿಧಿ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ರಿಟ್ ಅರ್ಜಿಯ ಊರ್ಜಿತತೆಯ ಸಂಬಂಧದಲ್ಲಿ ಪ್ರಾರಂಭಿಕವಾಗಿಯೇ ಆಕ್ಷೇಪವನ್ನು ಎತ್ತಿರುವರು.ಅದಕ್ಕನುಸಾರವಾಗಿ ಅವರು, ಅಧಿಸೂಚನೆಯನ್ನು 13.03.2017 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ ಮತ್ತು ವೇಳಾಪಟ್ಟಿಯಂತೆ 15.03.2017 ರಂದು ಚುನಾವಣಾ ಪ್ರಕ್ರಿಯೆಯನ್ನು ಅನುಕ್ರಮವಾಗಿ ಆರಂಭಿಸಲಾಗಿದೆ.ಆದುದರಿಂದ, ಚುನಾವಣೆಯನ್ನು ತಡೆಯಲು ಪ್ರಶ್ನಿಸಿದ ರಿಟ್ ಅರ್ಜಿ ೦ ತು ಊರ್ಜಿತವಾಗಿರುವುದಿಲ್ಲವೆಂದು ನಿವೇದಿಸಿದ್ದಾರೆ.ಈಗೇನಾದರೂ ಚುನಾವಣೆ ಪ್ರಶ್ನಿಸಿ ಅರ್ಜಿ ದಾಖಲಿಸುವುದಕ್ಕೆ ಅರ್ಜಿದಾರರು ಬಯಸಿದರೆ ಚುನಾವಣೆಯ ನಂತರದಲ್ಲಿ ಪ್ರಶ್ನಿಸುವುದು ಮಾತ್ರವೇ ಅರ್ಜಿದಾರರಿಗೆ ಇರುವ ಪರಿಹಾರೋಪಾಯವಾಗಿದೆ.ಬಹುಮುಖ್ಯವಾಗಿ 24.03.2017 ರಂದು ಚುನಾವಣೆ ನಡೆಸುವುದಕ್ಕೆ ತೀರ್ಮಾನಿಸಲಾಗಿದೆ ಎಂದು ಮಾನ್ಯ ನ್ಯಾಯವಾದಿಗಳು ತಿಳಿಸಿರುವರು.ಆದುದರಿಂದ ಅದಕ್ಕನುಸಾರವಾಗಿ ಮಾನ್ಯ ನ್ಯಾಯವಾದಿಗಳು ಹಾಲಿ ರಿಟ್ ಅರ್ಜಿಯನ್ನು ಚುನಾವಣಾ ವ್ಯವಹರಣೆಗಳ ಪ್ರಕ್ರಿಯೆಯಲ್ಲಿ ಕುಂಠಿತ ಪರಿಣಾಮಗಳು ಕಂಡುಬಂದರೆ, ಅಡಚಣೆ ಉಂಟಾದರೆ, ನಿರ್ಬ ೦ ದಗಳು ಮತ್ತು ಮತ್ತು ವಿಳಂಬಗಳು ಕಂಡುಬಂದರೆ ಮಾತ್ರವೇ ದಾಖಲಿಸಬೇಕಾಗುತ್ತದೆಯೇ ವಿನಾಃ ಬೇರೆ ವಿಷಯಗಳ ಸಂಬಂಧದಲ್ಲಿ ರಿಟ್ ಅರ್ಜಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುವರು.ಅದಕ್ಕನುಸಾರವಾಗಿ ಅವರು ಭಾರತ ಸಂವಿಧಾನದ 243 ಝಡ್ಜಿ ಅನುಚ್ಛೇದವು ಅಂಥ ಪ್ರಾಧಿಕಾರವು ಪುಸ್ತಾಪಿಸುವ ಚುನಾವಣಾ ಅರ್ಜಿಯನ್ನು ಹೊರತುಪಡಿಸಿ ಯಾವುದೇ ಪುರಸಭೆ ಚುನಾವಣೆಯ ಬಗೆಗಿನ ಪ್ರಶ್ನಿಸುವುದನ್ನು ಅನರ್ಹಗೊಳಿಸಿದೆ ಮತ್ತು ರಾಜ್ಯ ವಿಧಾನಮಂಡಲವು ರಚಿಸಿದ ಕಾನೂನಿನ ಅಡಿಯಲ್ಲಿ ಅಂಥ ಕಾರ್ಯವಿಧಾನವನ್ನು ಉಪಬಂಧಿಸಿದೆ.ಮತ್ತಷ್ಟು ಮುಂದುವರೆದು, ಕರ್ನಾಟಕ ಪುರಸಭೆಗಳ

ಅಧಿನಿಯಮ (ಸಂಕ್ಷಿಪ್ತವಾಗಿ ' ಅಧಿನಿಯಮ) ದ 21 ರಿಂದ 26 ರ ಪ್ರಕರಣಗಳಲ್ಲಿ ದಾಖಲಿಸಿದ ಚುನಾವಣಾ ಅರ್ಜಿಯನ್ನು ನಿರ್ವಹಿಸುತ್ತದೆ.ಅದು ಅರ್ಜಿದಾರರು ಕ್ಲೇಮು ಮಾಡಬಹುದಾದ ಪರಿಹಾರ, ಕಾರಣಗಳ ಆಧಾರದ ಮೇಲೆ ಚುನಾವಣಾ ನ್ಯಾಯಾಧಿಕರಣದ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಮತ್ತು ಚುನಾವಣಾ ನ್ಯಾಯಾಧಿಕರಣವಾಗಿ ಚುನಾವಣೆಯನ್ನು ಅನೂರ್ಜಿತಗೊಳಿಸಲಾಗಿದೆ ಎಂದು ನಿರ್ಣಯಿಸಿದೆ.ಆಗಿದ್ದರೂ, ಭಾರತ ಸಂವಿಧಾನದ 243 ಝಡ್ಜಿ ಅನುಚ್ಛೇದದಲ್ಲಿ ಒಳಗೊಂಡಿರುವ ಪ್ರತಿಷೇಧದ ಬೆಳಕಿನಲ್ಲಿ ಹಾಲಿ ರಿಟ್ ಅರ್ಜಿಯು ಊರ್ಜಿತವಾಗುವುದಿಲ್ಲ.ಈ ಮೊಕದ್ದಮೆಗೆ ಅವಲಂಬನೆಯಾಗಿ ಕಾರ್ಯದರ್ಶಿ, ಭಾರತ ಚುನಾವಣಾ ಆಯೋಗ -ವಿರುದ್ಧ-ಅಶೋಕ್ ಕುಮಾರ್ ಮತ್ತು ಇತರರು – (2000) 8 ಎಸ್.ಸಿ.ಸಿ. 216, ಮೊಕದ್ದಮೆಯ ನಿರ್ಣಯವನ್ನು ಲಕ್ಷಕ್ಕೆ ತಂದುಕೊಳ್ಳಬೇಕೆಂದು ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುವರು ಹಾಗೂ ಚುನಾವಣಾ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿರುವುದರಿಂದ ಸದರಿ ಪ್ರಕ್ರಿಯೆಯೊಳಗೆ ಹಸ್ತಕ್ಷೇಪಮಾಡುವುದು ಸರಿಯಾದುದಲ್ಲ ಎಂದು ನಿವೇದಿಸಿರುವರು.

7. ಮತ್ತೊಂದು ಕಡೆಯಲ್ಲಿ, ಅರ್ಜಿದಾರರ ಪರವಾಗಿ ಶ್ರೀ ವಿ. ಲಕ್ಷ್ಮೀನಾರಾಯಣ, ಹಿರಿಯ ನ್ಯಾಯವಾದಿಗಳು, ತಾವು ಮಂಡಿಸಿದ ವಾದದಲ್ಲಿ ಪ್ರತ್ಯರ್ಜಿದಾರರು ಅಧ್ಯಕ್ಷ ಲ್ಯು ಸ್ಥಾನವನ್ನು ' ಸಾಮಾನ್ಯ ' ವರ್ಗದಿಂದ ' ಸಾಮಾನ್ಯ ಮಹಿಳೆ ' ಪ್ರವರ್ಗಕ್ಕೆ ಬದಲಾವಣೆ ಮಾಡಿರುವ ವಿರುದ್ಧ ಸತತವಾಗಿ ಹೋರಾಡುತ್ತಲೇ ಬಂದಿರುವುದನ್ನು ಆಗ್ರಹಪೂರ್ವಕವಾಗಿ ನಿವೇದಿಸಿರುವರು.ಈ ಮುಂಚಿನ ಸಂದರ್ಭದಲ್ಲಿಯೇ ಅರ್ಜಿದಾರರು ದಿನಾಂಕ 04.03.2016 ಅಧಿಸೂಚನೆಯನ್ನು ಸಹ ಪ್ರಶ್ನಿಸಿರುವರು, ಮತ್ತುದಿನಾಂಕ: 27.10.2016 ಅಧಿಸೂಚನೆಯನ್ನು ಸಹ ಪ್ರಶ್ನಿಸಿರುವರು.ಅರ್ಜಿದಾರರು ಮೊದಲುದಿನಾಂಕ: 04.03.2016 ಅಧಿಸೂಚನೆಯ ವಿರುದ್ಧ ರಿಟ್ ಅರ್ಜಿಯನ್ನು ದಾಖಲಿಸಿರುವರು.ನಂತರದಲ್ಲಿ ಅದನ್ನು ಹಿಂಪಡೆದಿರುವರು.ಆದರೆದಿನಾಂಕ: 27.10.2016 ರ ಅಧಿಸೂಚನೆಯನ್ನು ಪ್ರಶ್ನಿಸುವ ಅವನ ಹಕ್ಕನ್ನು ಯಾರು ಕಸಿದುಕೊಳ್ಳಲು ಬರುವುದಿಲ್ಲ.ಆದರೆ ಚುನಾವಣಾ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿರುತ್ತದೆ.ಎರಡನೆಯದಾಗಿ, ಪ್ರತ್ಯರ್ಜಿದಾರರು, ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ವರ್ಗದ ಮಹಿಳೆ ಪ್ರವರ್ಗಕ್ಕೆ ಮೀಸಲಿಟ್ಟಿರುವುದರಿಂದ ಅಧಿನಿಯಮದ 42 ನೇ ಪ್ರಕರಣದ ಉಪಬಂಧಗಳು ಮತ್ತು ಕರ್ನಾಟಕ ಪುರಸಭೆ (ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣಾ ನಿಯಮಗಳು, 1965 (ಸಂಕ್ಷಿಪ್ತವಾಗಿ ' ನಿಯಮಗಳು) ರ 13 ಮತ್ತು 13 ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿರುವುದರಿಂದ ಅರ್ಜಿದಾರರಿಗೆದಿನಾಂಕ: 13.03.2017 ಅಧಿಸೂಚನೆಯನ್ನು ಪ್ರಶ್ನಿಸುವುದಕ್ಕೆ ಮತ್ತು 15.03.2017 ರಂದು ಪ್ರತ್ಯರ್ಜಿದಾರರು ಹೊರಡಿಸಿದ ಆದೇಶವನ್ನು ಪ್ರಶ್ನಿಸುವುದಕ್ಕೆ ಅವರು ಯುಕ್ತ ಹಕ್ಕನ್ನು ಹೊಂದಿರುವರು ಮತ್ತು ಆದುದರಿಂದ, ಈ ನ್ಯಾಯಾಲಯದ ಮುಂದೆ ಸಲ್ಲಿಸಿದ ರಿಟ್ ಅರ್ಜಿಯು ಸ್ಪಷ್ಟವಾಗಿ ಊರ್ಜಿತವಾಗುತ್ತದೆಂದು ನಿವೇದಿಸಿದ್ದಾರೆ.

8. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಸುನಾವಣೆ ಮಾಡಲಾಗಿದೆ.

9. ಭಾರತ ಸಂವಿಧಾನದ 329 ನೇ ಅನುಚ್ಛೇದದಲ್ಲಿರುವ ವಿಷಯ ಪರಿಧಿಯಲ್ಲಿ ಭಾರತ ಸಂವಿಧಾನದ 243-ಝಡ್ಜಿ ಅನುಚ್ಛೇದದ ವಿಷಯ ಪರಿಧಿಯಲ್ಲಿ ಸಾಮ್ಯತೆ ಹೊಂದಿದೆ, ಎರಡು ಅನುಚ್ಛೇದಗಳು ಚುನಾವಣೆ ಅರ್ಜಿಯನ್ನು ಹೊರತುಪಡಿಸಿ ಚುನಾವಣೆ ಪ್ರಕ್ರಿಯೆಯನ್ನು ಪ್ರಶ್ನಿಸುವುದನ್ನು ಪ್ರತಿರೋಧಿಸುತ್ತವೆ.ಸರ್ವೋಚ್ಚ ಚ ನ್ಯಾಯಾಲಯದ ಸಂವಿಧಾನಾತ್ಮಕ ಪೀಠವು ಎನ್.ಪಿ. ಪೊನ್ನುಸ್ವಾಮಿ ವಿರುದ್ಧ ರಿಟರ್ನಿಂಗ್ ಆಫೀಸರ್, ನಮಕ್ಕಲ್ ಮತಕ್ಷೇತ್ರ, ನಮಕ್ಕಲ್, ಸೇಲಂ ಜಿಲ್ಲೆ ಮತ್ತು ಇತರರು - ಎ.ಐ.ಆರ್. 1952 ಎಸ್.ಸಿ. 64, ಮೊಕದ್ದಮೆಯಲ್ಲಿ ಭಾರತ ಸಂವಿಧಾನದ 329(ಬಿ) ಅನುಚ್ಛೇದದಲ್ಲಿ ಒಳಗೊಂಡಿರುವ ವ್ಯಾಪ್ತಿ ಮತ್ತು ಪರಿಧಿಯನ್ನು ಪ್ರತಿಷೇಧಿಸಿದೆ ಎಂಬ ನಿರ್ಣಯವನ್ನು ಇಲ್ಲಿ ಅವಲಂಬನೆಯಾಗಿ ನಿವೇದಿಸಿರುವರು.ಮುಂದುವರೆದು ಭಾರತ ಸಂವಿಧಾನದಲ್ಲಿ 'ಚುನಾವಣೆ' ಎಂಬ ಪದವನ್ನು ಪರಿಭಾಷಿಸಿರುವುದು ಭಾಗ XV ರಲ್ಲಿ ಬಳಸಲಾಗಿದೆ ಮತ್ತು ಅದನ್ನು ವ್ಯಾಖ್ಯಾನಿಸಲಾದ, ಸರ್ವೋಚ್ಚ ನ್ಯಾಯಾಲಯವು ' ಚುನಾವಣೆ ' ಚ ಪದದ ಸಂಬಂಧದಲ್ಲಿ ಅದು ಆ ಪದವನ್ನು ತುಂಬಾ ವಿಶಾಲವಾದ ಅರ್ಥವ್ಯಾಪ್ತಿಯಲ್ಲಿ ಬಳಸಲಾಗಿದೆ ಎಂದು ಮತ್ತು ವಿಧಾನಸಭೆ ಅಭ್ಯರ್ಥಿಗಳ ಆಯ್ಕೆಗಾಗಿ ನಡೆಯುವ ಪ್ರಕ್ರಿಯೆಗೆ ಮಾತ್ರವಾಗಿ ಮೂಲಾರ್ಥವನ್ನು ಅದು ಹೊಂದಿಲ್ಲ.ಆದುದರಿಂದ ಚುನಾಯಿತ ಸದಸ್ಯನ ಆಯ್ಕೆಯಲ್ಲಿ ಹಲವಾರು ಹಂತಗಳನ್ನು ಮತ್ತು ಹಲವಾರು ಕ್ರಮಗಳನ್ನು ಒಳಗೊಂಡಿರುವ ಇಡೀ ಪ್ರಕ್ರಿಯೆಯು

ಅಡಕಗೊಳ್ಳುವ ದೃಷ್ಟಿಯಲ್ಲಿ ಅನುಚ್ಛೇದ 329 (ಬಿ) ಯಲ್ಲಿ 'ಚುನಾವಣೆ' ಪದವನ್ನು ಬಳಸಲಾಗಿದೆ.ಆದ್ದರಿಂದ ' ಚುನಾವಣೆ ' ಪದವನ್ನು ಸಂಕುಚಿತ ಅರ್ಥದಲ್ಲಿ ಬಳಸಬಾರದು ಎಂದು ಅಭಿಪ್ರಾಯಪಟ್ಟಿದೆ.

10. ಮುಂದುವರೆದು, ಚುನಾವಣೆ ಸಂಬಂಧದ ವ್ಯವಹರಣೆಗಳನ್ನು ನಿರ್ವಹಿಸುವಂತಹ ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ 80 ನೇ ಪ್ರಕರಣದಲ್ಲಿ ಪ್ರತಿಷೇಧ ಅಂಶಗಳು ಒಳಗೊಂಡಿದೆ ಮತ್ತು ಭಾರತ ಸಂವಿಧಾನದ 226 ನೇ ಅನುಚ್ಛೇದ ಅಡಿಯಲ್ಲಿ ಒಳಗೊಂಡ ಉಚ್ಚ ನ್ಯಾಯಾಲಯದ ಎಂದು ಅಭಿಪ್ರಾಯಪಟ್ಟಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತನ್ನ ಅಭಿಪ್ರಾಯೋಕ್ತಿಯನ್ನು ಮಂಡಿಸಿದೆ:

ಭಾರತದಲ್ಲಿ ಉದ್ದೇಶಿತ ಚುನಾವಣಾ ಕಾನೂನಿನಲ್ಲಿ ಚುನಾವಣಾ ವ್ಯವಹಾರಗಳೊಂದಿಗೆ ಸಂಪರ್ಕವನ್ನಿಟ್ಟು ಕೊಂಡ ವಸ್ತುವಿಷಯದ ಎರಡು ಮಾರ್ಗಗಳ ಮುಖಾಂತರ ಹಸ್ತಕ್ಷೇಪ ಮಾಡಬಹುದಾಗಿದೆ ಎಂಬುದು ಒಳಗೊಂಡಿರುವುದಿಲ್ಲ.ಅದರಲ್ಲಿ ಒ ಂ ದು ಸಂವಿಧಾನದ 226 ನೇ ಅನುಚ್ಛೇದ ಅಡಿಯಲ್ಲಿ (ನ್ಯಾಯಾಲಯಗಳು ಸಾಮಾನ್ಯವಾಗಿ ಹೊಂದಿರುವ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸಿರುವ ಅಭಿವ್ಯಕ್ತಿ) ಉಚ್ಚ ಚ ನ್ಯಾಯಾಲಯದ ವಿಶೇಷ ಅಧಿಕಾರ ವ್ಯಾಪ್ತಿಯನ್ನು ಆಹ್ವಾನಿಸುವ ಮೂಲಕ ಮತ್ತು ಮತ್ತೊಂದು ಪರಾಯವಾಗಿ ಚುನಾವಣಾ ಅರ್ಜಿ ಎಂಬ ಸಾಧನವನ್ನು ಪರಿಸಮಾಪ್ತಿಗೊಳಿಸುವ ಮೂಲಕ ಹಸ್ತಕ್ಷೇಪ ಮಾಡಬಹುದಾಗಿದೆ.ಚುನಾವಣೆಯ ಆ ಯಾವುದೇ ವಸ್ತು ವಿಷಯವನ್ನು ಪರಿಣಾಮಕಾರಿಯಾಗಿ ನಿರರ್ಥಕಗೊಳಿಸಲು ವಿಶೇಷ ನ್ಯಾಯಾಧಿಕರಣ ಮುಂದೆ ಯುಕ್ತ ಹಂತದಲ್ಲಿ ಯುಕ್ತರೀತಿಯಲ್ಲಿ ಆ ವಸ್ತುವಿಷಯವನ್ನು ತರಬೇಕಾಗುತ್ತದೆ ಮತ್ತು ಯಾವುದೇ ನ್ಯಾಯಾಲಯದ ಮುಂದೆ ತರಬಾರದು.ಚುನಾವಣಾ ಕಾನೂನಿನ ಅಡಿಯಲ್ಲಿ, ಚುನಾವಣೆಯನ್ನು ನಾಮನಿರ್ದೇಶನ ಪತ್ರಗಳೊಳಗೊಂಡಿರುವ ಸಂಗತಿಗಳ ಮೇಲೆ ಮಾತ್ರವೇ ನಿರಾಕರಿಸಬಹುದು ಮತ್ತು ಆ ಸಂಗತಿಗಳ ಆಧಾರದ ಮೇಲೆ ಚುನಾವಣೆಯನ್ನು ಪ್ರಶ್ನಿಸಬಹುದಾಗಿದೆ. 329 (ಬಿ) ಅನುಚ್ಛೇದದಲ್ಲಿ ಈ ಕಾರಣಗಳಿಂದ ಆ ಯಾವುದೇ ರೀತಿಯಲ್ಲಿ ಮತ್ತು ಆ ಯಾವುದೇ ಹಂತದಲ್ಲಿ ನಿಯಮಿಸಿ ಅಧಿನಿಯಮಿಸುವುದು ಕಂಡುಬರುತ್ತದೆ.ಮತ್ತು ಕಾನೂನಿನ ಅಡಿಯಲ್ಲಿ ಎತ್ತಲಾದ ಇತರ ಕಾರಣಗಳಿಂದಲೂ ಚುನಾವಣೆಯನ್ನು ಪ್ರಶ್ನಿಸಬಹುದಾಗಿದೆ. ಈ ಉಪಬಂಧದ ಅಭಿವ್ಯಕ್ತಿಯಿಂದ ಸೂಚ್ಯವಾದ ಅಗತ್ಯತೆಗಳನ್ನು ಅನುಸರಿಸುವ ಮೂಲಕ ಯಾವುದೇ ಇತರೆ ರೀತಿಯಲ್ಲಿ ಯಾವುದೇ ಇತರ ಹಂತದಲ್ಲಿ ಮತ್ತು ಯಾವುದೇ ಇತರ ನ್ಯಾಯಾಲಯ ಮುಂದೆ ಆ ಎಲ್ಲಾ ಕಾರಣಗಳನ್ನು ಮಂಡಿಸಲು ಸಾಧ್ಯವಾಗುವುದಿಲ್ಲ.ಪ್ರಾರಂಭಿಕ ಹಂತದಲ್ಲಿಯೇ ಆ ಯಾವುದೇ ಕಾರಣಗಳ ಮೇಲೆ ಮತ್ತು ದೋಷಗಳೇನಾದರೂ ಕಂಡುಬಂದರೆ ಚುನಾವಣೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಬಹುದು.ಆ ಕಾರಣಗಳನ್ನು, ದೋಷಗಳನ್ನು ಪ್ರಾರಂಭಿಕ ಹಂತದಲ್ಲಿ ಅವುಗಳನ್ನು ಸರಿಪಡಿಸಬಹುದಾಗಿದೆ.ಆದುದರಿಂದಲೇ 329 (ಬಿ) ಅನುಚ್ಛೇದದಂತಹ ಉಪಬಂಧಗಳಿಗೆ ಅಧಿನಿಯಮಿಸಿರುವುದರಲ್ಲಿ ಮತ್ತು ವಿಶೇಷ ನ್ಯಾಯಾಧಿಕರಣವನ್ನು ಸ್ಥಾಪಿಸುವುದರಲ್ಲಿ ಯಾವುದೇ ಅರ್ಥ ಕಂಡುಬರುವುದಿಲ್ಲ.ಅನುಚ್ಛೇದದಲ್ಲಿ ಬಳಸಿದ ಪದಗಳಿಗೆ ಆರೋಪಿಸಲಾದ ಯಾವುದೇ ಇತರ ಅರ್ಥಗಳು ಅಸಂಗತವಾಗಿದೆ.ಸಂವಿಧಾನದ ಉದ್ದೇಶವು ಇದಾಗಿರುವುದಿಲ್ಲ.ಮತದಾನ ಪೂರ್ವದ ಹಂತದಲ್ಲಿ ಉಚ್ಚ ನ್ಯಾಯಾಲಯದ ಅಭಿವ್ಯಕ್ತಿ ಮತ್ತು ಚುನಾವಣಾ ನ್ಯಾಯಾಧಿಕರಣದ ಅಭಿವ್ಯಕ್ತಿಯ ಅಭಿಪ್ರಾಯಗಳಲ್ಲಿನ ವಿರೋದಾಬಾಸಗಳಿಂದ ಕೂಡಿರುವಾಗ ಆ ಯಾವುದೇ ವಸ್ತುವಿಷಯವನ್ನು ಆ ಹಂತದಲ್ಲಿಯೇ ಸ್ವತಂತ್ರನಿಕಾಯದ ಮುಂದೆ ತರಬೇಕಾಗುತ್ತವೆ.

ಜನತಾ ಪ್ರಾತಿನಿಧ್ಯ ಅಧಿನಿಯಮವು ಸಾಧ್ಯವಾದಷ್ಟು ಚುನಾವಣೆಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸ್ವಯಂವೇದ್ಯವಾದ ಅಧಿನಿಯಮವಾಗಿದೆ, ಎಂದರೆ ನಾವು ಚುನಾವಣೆಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡಿರುವ ಯಾವುದೇ ವಿಷಯಗಳ ಸಂಬಂಧದಲ್ಲಿ ಅದರ ನೈಜಸ್ವರೂಪವನ್ನು ಆ ಯಾವುದೇ ಸಂದರ್ಭದಲ್ಲಿ ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಮುಖಾಂತರ ಮಾತ್ರವೇ ನಿರ್ಧರಿಸಬೇಕಾಗುತ್ತದೆ. ಅನುಚ್ಛೇದ 329 (ಬಿ) ಯಲ್ಲಿ ಉಪಬಂಧಿಸಿದ ಅಭಿವ್ಯಕ್ತಿಯ ಅಂಶಗಳು ಈ ಅಧಿನಿಯಮದ 80 ನೇ ಪ್ರಕರಣದಲ್ಲೂ ಅದೇ ಅಂಶಗಳಲ್ಲೂ ನಿರೂಪಿತವಾಗಿರುವುದನ್ನು ನೋಡಬಹುದು, ' ಈ ಭಾಗದಲ್ಲಿನ ಉಪಬಂಧಗಳಿಗೆ ಅನುಸಾರವಾಗಿ ಚುನಾವಣಾ ಅರ್ಜಿಯನ್ನು ಮಂಡಿಸಿದ ಹೊರತು ಚುನಾವಣೆಯನ್ನು ತಡೆಯಲು ಕೇಳತಕ್ಕದ್ದಲ್ಲ, ಈ ಅಧಿನಿಯಮದ 80 ನೇ ಪ್ರಕರಣದ ಜೊತೆಯಲ್ಲಿ 100, 105 ಮತ್ತು 170 ನೇ ಪ್ರಕರಣಗಳು ನ್ಯಾಯಿಕ ವ್ಯಾಪ್ತಿಗೆ ಒಳಪಡುವ ಚುನಾವಣಾ ವಿಷಯಗಳ ಸ ಂ ಬ ಂ ಧದಲ್ಲಿ ಮಹತ್ವದ ಉಪಬಂಧಗಳನ್ನು ಒಳಗೊಂಡಿದೆ ಮತ್ತು ಈ ಪ್ರಕರಣಗಳಲ್ಲಿ ಮಧ್ಯಂತರ ಹಂತದಲ್ಲಿ

ಚುನಾವಣೆಯೊಂದಿಗೆ ಪರಿಣಾಮಕಾರಿಯಾಗಿ ಸಂಪರ್ಕವನ್ನಿಟ್ಟುಕೊಂಡ ಆ ಯಾವುದೇ ವಸ್ತುವಿಷಯವನ್ನು ಪ್ರಶ್ನಿಸುವುದಕ್ಕೆ ಯಾವುದೇ ಉಪಬಂಧಗಳನ್ನು ಹೊಂದಿರುವುದಿಲ್ಲ.

ಚುನಾವಣಾ ಅರ್ಜಿಯನ್ನು ಸಲ್ಲಿಸುವ ಪರಿಹಾರೋಪಾಯಗಳನ್ನು ಒಳಗೊಂಡಿರುವ ಈ ಅಧಿನಿಯಮದ 21 ನೇ ಪ್ರಕರಣದಲ್ಲೂ ಮತ್ತು ಭಾರತ ಸಂವಿಧಾನದ 243-ಝಡ್ ಅನುಚ್ಛೇದದಲ್ಲೂ ಅದೇ ಸಹ-ಸಂಬಂಧಿತ ವಿಷಯಗಳನ್ನು ಒಳಗೊಂಡಿದೆ.ಆದುದರಿಂದ ಪ್ರಸ್ತುತ ರಿಟ್ ಅರ್ಜಿಗೂ ಅದೇ ತತ್ವಗಳೂ ಅನ್ವಯವಾಗುತ್ತವೆ.

11. ಸರ್ವೋಚ್ಚ ನ್ಯಾಯಾಲಯವು ಮೊಹಿಂದರ್ ಸಿಂಗ್ ಗಿಲ್ ಮತ್ತು ಮತ್ತೊಬ್ಬರು -ವಿರುದ್ಧ-ಮುಖ್ಯ ಚುನಾವಣಾ ಆಯುಕ್ತರು, ನವದೆಹಲಿ ಮತ್ತು ಇತರರು - ಎಐಆರ್ 1978 ಎಸ್ಸಿ 851, ಮೊಕದ್ದಮೆಯಲ್ಲಿ ಚುನಾವಣಾ ವಿವಾದಗಳು ಎರಡು ಪಕ್ಷಕಾರರ ನಡುವಿನ ಖಾಸಗಿ ಸಿವಿಲ್ ವಿವಾದವಾಗಿರುವುದಿಲ್ಲ " ಎಂದು ತನ್ನ ಅಭಿಪ್ರಾಯೋಕ್ತಿಯನ್ನು ದಾಖಲಿಸಿದೆ.ಈ ನ್ಯಾಯಾಲಯದ ಮುಂದೆ ಪಕ್ಷಕಾರರಂತೆ ಒಬ್ಬ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳು ಕಂಡುಬಂದರೂ ಇಡೀ ಚುನಾವಣಾ ಕ್ಷೇತ್ರವೇ ಅಧಿವಿಚಾರಣೆಗೆ ಒಳಪಡುತ್ತದೆ.ಅಧಿವಿಚಾರಣೆಯ ತೀರ್ಮಾನವು ಸಾಮಾನ್ಯವಾಗಿ ಚುನಾವಣಾ ಕ್ಷೇತ್ರ ಮತ್ತು ಜನರ ತೀರ್ಮಾನಕ್ಕೆ ಬಾಧಿತವಾಗುವ ರೀತಿಯಲ್ಲಿ ಕಂಡುಬಂದ ಪಕ್ಷದಲ್ಲಿ ಆಗ ಚುನಾವಣಾ ಕ್ಷೇತ್ರದ ಕ್ಷೇಮಕ್ಕಾಗಿ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವ ದೃಷ್ಟಿಯಿಂದ ನಿರ್ಣಯವನ್ನು ಮನಃಪೂರ್ವಕವಾಗಿ ಅಧ್ಯಾರೋಹಿಗೊಳಿಸುವುದು.ವ್ಯತಿರಿಕ್ತ ನಿರ್ಣಯಗಳನ್ನು ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳಬಾರದು ಹಾಗೆಯೇ ಅತಿ-ಉತ್ಸಾಹದಿಂದ ಅವುಗಳನ್ನು ಸಕ್ರಿಯಗೊಳಿಸುವ ಪಾತ್ರವನ್ನು ನಿರ್ವಹಿಸಬಾರದು, ತದ್ವಿರುದ್ಧ ನಿರ್ಣಯಗಳು ಚುನಾವಣೆ ವಿವಾದದಲ್ಲಿನ ವ್ಯವಹರಣೆಗಳನ್ನು ತ್ಯಜಿಸುವಂತೆ ಮಾಡುತ್ತವೆ."

12. ಸರ್ವೋಚ್ಚ ನ್ಯಾಯಾಲಯ ಅಶೋಕ್ ಕುಮಾರ್ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ಮುಂದಿನಂತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ, " ಚುನಾವಣಾ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಕಾಲದಲ್ಲಿ ನ್ಯಾಯಾಲಯ ಯಾವುದೇ ಚುನಾವಣಾ ವಿವಾದಗಳನ್ನು ಸ್ವೀಕರಿಸುವುದಕ್ಕೆ 329 (ಬಿ) ಅನುಚ್ಛೇದದ ಉಪಬಂಧಗಳಿಗೆ ಧಕ್ಕೆಯಾಗದಂತೆ ಮತ್ತು ಪ್ರತಿಷೇಧಿಸದಿರುವ ಹಾಗೆ ನ್ಯಾಯಾಲಯವು ಅತಿ ಜಾಗರೂಕತೆಯಿಂದ ಮತ್ತು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.ನ್ಯಾಯಾಲಯವು ಚುನಾವಣಾ ವ್ಯವಹರಣೆಗಳ ಕುಂಠಿತಗೊಳಿಸುವ, ಹಸ್ತಕ್ಷೇಪಿಸುವ, ಲಂಬಿಸುವ ಅಥವಾ ಅಡ್ಡಿಯುಂಟು ಮಾಡುವ ಪ್ರಯತ್ನಗಳ ವಿರುದ್ಧ ಗುರಾಣಿಯಂತೆ ಇರಬೇಕು.ನ್ಯಾಯಾಲಯವು ಚುನಾವಣಾ ಕ್ಷೇತ್ರದಲ್ಲಿ ಆಯ್ಕೆಗಾಗಿ ನಾಮನಿರ್ದೇಶನಕ್ಕೆ ಸಲ್ಲಿಸಿದ ಚುನಾವಣಾ ಅರ್ಜಿಗಳು ದೋಷರಹಿತವಾಗಿರುವ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದರೂ, ಗುಪ್ತತೆ ಅಥವಾ ಮರೆಮಾಚುವಿಕೆಯನ್ನು ಸಾಧಿಸುವುದಕ್ಕಾಗಿ ಕ್ರಮೋಪಾಯ ಅಥವಾ ನೆಪಗಳ ಅಗತ್ಯತೆಗಳನ್ನು ಬಳಸಿಕೊಂಡಿರುವ ಸಾಧ್ಯತೆಯ ಬಗ್ಗೆ ನ್ಯಾಯಾಲಯವು ತನ್ನ ಆದ್ಯ ಗಮನ ಕೊಡಬೇಕಾಗುತ್ತದೆ.ನ್ಯಾಯಾಲಯವು ಸ್ಪಷ್ಟ ಮತ್ತು ಸಮರ್ಥವಾದ ಮೊಕದ್ದಮೆಯನ್ನು ಹೊರತುಪಡಿಸಿ ಈ ರೀತಿಯ ಅಸ್ಪಷ್ಟ, ವ್ಯತ್ಯಸ್ಥ ಸ್ವರೂಪದ ಮೊಕದ್ದಮೆಗಳನ್ನು ಅನವಶ್ಯಕವಾಗಿ ಹಿಂಜರಿಕೆಯ ಕ್ರಮಗಳನ್ನು ತೆಗೆದುಕೊಳ್ಳದೆ ಎಲ್ಲಿ ತನ್ನ ಹಸ್ತಕ್ಷೇಪದ ಅವಶ್ಯಕತೆ ಇದೆಯೇ, ಅಲ್ಲಿ ಮಾತ್ರವೇ ಅವಶ್ಯಕ ವಸ್ತುವಿಷಯಗಳಲ್ಲಿ ನಿರ್ದಿಷ್ಟತೆ ಮತ್ತು ಮಹತ್ವಪೂರ್ಣ ಮತ್ತು ಪೂರಕವಾಗಿರುವಂತಹ ನಿರೂಪಣೆಗಳಿಂದ ಎತ್ತಲಾದ ಅಂಶಗಳು ಇದ್ದಾಗ ಮಾತ್ರವೇ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು ಅವಶ್ಯಕವಾಗಿದೆ."

ಆದುದರಿಂದ, ಈ ನ್ಯಾಯಾಲಯದ ಮುಂದೆ ನಿರ್ಣಯಕ್ಕೆ ಬಂದಿರುವ ರಿಟ್ ಅರ್ಜಿಯೂ ಅನೂರ್ಜಿತಗೊಂಡಿದೆ, ಎರಡೂ ಪಕ್ಷಕಾರರ ಪರವಾದ ಮಾನ್ಯ ನ್ಯಾಯವಾದಿಗಳು ತಮ್ಮ ವಾದಗಳಲ್ಲಿ ಎತ್ತಿದ ನಿರೂಪಣಾಂಶಗಳನ್ನು ಸಮಾನವಾಗಿ ಅಗತ್ಯಪೂರ್ವಕವಾಗಿ ಪರಿಗಣಿಸಲಾಗಿದೆ ಮತ್ತು ನ್ಯಾಯಾಲಯವು ಈ ವಿಚಾರದಲ್ಲಿ ಹಸ್ತಕ್ಷೇಪಿಸುವುದಕ್ಕೆ ಅರ್ಜಿದಾರರ ಈ ಮೊಕದ್ದಮೆಯು ಸ್ಪಷ್ಟವಾಗಿದೆ ಮತ್ತು ಸಮರ್ಥವಾಗಿದೆ, ಅಥವಾ ಮೊಕದ್ದಮೆಯೂ ಸುಸ್ಪಷ್ಟವಾಗಿಲ್ಲವೇ ಅಥವಾ ಅಸಮರ್ಥವಾಗಿದೆಯೇ ಎಂಬುದನ್ನು ನಿರ್ಣಯಿಸಬೇಕಾಗಿದೆ?

13. ಹಿರಿಯ ನ್ಯಾಯವಾದಿಗಳಾದ ಶ್ರೀ ವಿ. ಲಕ್ಷ್ಮೀನಾರಾಯಣರವರು, ಈ ನ್ಯಾಯಾಲಯವನ್ನು ಚುನಾವಣೆ ನಡೆಯಲು ಕೇವಲ ಒಂದು ದಿನ ಇದ್ದಾಗಲೂ ಚುನಾವಣಾ ಪ್ರಕ್ರಿಯೆಯನ್ನು ತಡೆಯುವುದಕ್ಕೆ ಸಾಧ್ಯವೆಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದಲೆ ತನ್ನದೇ ವಾದ ಸರಣಿಯನ್ನು ಮಂಡಿಸಿರುವರು.ಅಧಿನಿಯಮದ 42 ನೇ ಪ್ರಕರಣದ ಮೇಲೆ ಅವಲಂಬಿತವಾಗಿ, ಪ್ರತಿಯೊಂದು ನಗರಸಭೆಯು

ತನ್ನದೇ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಹೊಂದಿರುವುದು ಅತ್ಯಗತ್ಯವಿದೆ ಎಂದು ಮಾನ್ಯ ಹಿರಿಯ ನ್ಯಾಯವಾದಿಗಳು ಪ್ರಾರ್ಥಿಸಿರುವರು.ಅಧಿನಿಯಮದ 42 ( 2-ಎ) ಪ್ರಕರಣಕ್ಕೆ ಅನುಸಾರವಾಗಿ, ರಾಜ್ಯದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದಗಳ ಸಂಖ್ಯೆಗನುಸಾರವಾಗಿ ಆ ಸ್ಥಾನಗಳನ್ನು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಅವಶ್ಯವಾಗಿ ಮೀಸಲುಗೊಳಿಸುವುದು.ಅಧಿನಿಯಮದ 43 ನೇ ಪ್ರಕರಣದ ( 2-ಎ) ಉಪ ಪ್ರಕರಣದ ನಾಲ್ಕನೆಯ ಪರಂತುಕದ ಅನುಸಾರವಾಗಿ, ವಿವಿಧ ನಗರಸಭೆಗಳಿಗೆ ನಿಯಮಿಸಿದ ರೀತಿಯಲ್ಲಿ ಸರದಿಯ ಮೂಲಕ ಉಪ ಪ್ರಕರಣದ ಅಡಿಯಲ್ಲಿ ಪದಗಳನ್ನು ಮೀಸಲುಗೊಳಿಸಿ ಹಂಚಿಕೆ ಮಾಡತಕ್ಕದ್ದು. ಅಲ್ಲದೆ, ಅಧಿನಿಯಮದ 43 ನೇ ಪ್ರಕರಣದ ( 2 ಎ) ಉಪ ಪ್ರಕರಣಕ್ಕೆ ಸೇರಿಸಲಾದ ವಿವರಣೆಗೆ ಅನುಸಾರವಾಗಿ, ಈ ಉಪಪಕರಣದ ಅಡಿಯಲ್ಲಿ ಪದಗಳನ್ನು ಮೀಸಲುಗೊಳಿಸುವ ಉದ್ದೇಶಕ್ಕಾಗಿ ಸರದಿಯ ತತ್ವವು 1994 ಜೂನ್ ಒಂದನೇ ತಾರೀಖಿನ ನಂತರ ನಡೆಯುವ ಮೊದಲ ಸಾಮಾನ್ಯ ಚುನಾವಣೆಯಿಂದಲೇ ಪ್ರಾರಂಭವಾಗತಕ್ಕದ್ದು.

ಮಾನ್ಯ ಹಿರಿಯ ನ್ಯಾಯವಾದಿಗಳು ನಿಯಮದ ಉಪಬಂಧಗಳಲ್ಲಿನ " ನಿಯಮಿಸಿದ ರೀತಿಯಲ್ಲಿ ನಿಯಮಿಸಿದ " ಎಂಬ ಪದಗಳನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುವರು.ದಿನಾಂಕ 05.02.2016 ರ ಸರ್ಕಾರಿ ಆದೇಶದ ಅವಲ ಂ ಬನೆಯಾಗಿ ತೆಗೆದುಕೊಂಡರೆ, ಪ್ರಸ್ತುತ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದಗಳಿಗೆ ನಡೆಸಲಾಗುವ ಚುನಾವಣೆಯೂ ಈ ಆದೇಶಕ್ಕೆ ಒಳಪಡುತ್ತವೆ.ಹಿರಿಯ ನ್ಯಾಯವಾದಿಗಳು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಂಬಂಧದಲ್ಲಿ ಹಂಚಿಕೆಯಾಗುವ ಸ್ಥಾನಗಳು ಎಂದರೆ ಅನುಸೂಚಿತ ಜಾತಿ ಮಹಿಳೆ > ಅನುಸೂಚಿತ ಬುಡಕಟ್ಟು > ಅನುಸೂಚಿತ ಜಾತಿ > ಅನುಸೂಚಿತ ಬುಡಕಟ್ಟು ಮಹಿಳೆ > > ಹಿಂದುಳಿದ ಜಾತಿ ಎ ಮಹಿಳೆ > ಸಾಮಾನ್ಯ > ಹಿಂದುಳಿದ ಜಾತಿ ಬಿ ಮಹಿಳೆ > ಹಿಂದುಳಿದ ಜಾತಿ ಎ > ಸಾಮಾನ್ಯ ಮಹಿಳೆ > ಹಿಂದುಳಿದ ಜಾತಿ ಬಿ ಈ ಅನುಕ್ರಮಕ್ಕೆ ಅನುಸಾರವಾಗಿರತಕ್ಕದ್ದು ಎಂದು ಪ್ರಾರ್ಥಿಸಿರುವರು.

14. ಅತಿಮುಖ್ಯವಾಗಿ, ಮಾನ್ಯ ಹಿರಿಯ ನ್ಯಾಯವಾದಿಗಳು " ಹೀಗೆ ಮೀಸಲುಗೊಂಡ ಸ್ಥಾನಗಳು ಇಡೀ ಆವರ್ತನವನ್ನು ಸಂಪೂರ್ಣಗೊಳ್ಳದ ಹೊರತು ಪುನರಾವರ್ತಿಗೊಳ್ಳತಕ್ಕದ್ದಲ್ಲ " ಎಂಬ ವಾಸ್ತವಾಂಶದ ಕಡೆಗೆ ಒತ್ತು ನೀಡಿರುವರು.ಆದಾಗ್ಯೂ, ಪ್ರಸ್ತುತ ಮೊಕದ್ದಮೆಯಲ್ಲಿ, ಮಾನ್ಯ ಹಿರಿಯ ನ್ಯಾಯವಾದಿಗಳು, ಬಾಗೇಪಲ್ಲಿ ನಗರಸಭೆಯ ಅಧ್ಯಕ್ಷ ಸ್ಥಾನವನ್ನು ಈಗಾಗಲೇ ಆರನೇ ಬಾರಿಯಾಗಿ ಸಾಮಾನ್ಯ ಮಹಿಳಾ ಪ್ರವರ್ಗಕ್ಕೆ ಇಡಲಾಗಿದೆ.ಆದುದರಿಂದ, ಅಧ್ಯಕ್ಷ ಸ್ಥಾನವನ್ನು ಪ್ರಸ್ತುತ ಅವಧಿಯನ್ನು (ಎಂಟನೇ ಅವಧಿಗೆ) ಸಾಮಾನ್ಯ ಮಹಿಳೆಗೆ (ಸಾ-ಮ) ಇಡತಕ್ಕದ್ದಲ್ಲ.ಹಾಗೇನಾದರೂ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆ (ಸಾಮ) ಪ್ರವರ್ಗಕ್ಕೆ ಮೀಸಲಿಟ್ಟರೆ ಅದೇ ಪ್ರವರ್ಗಕ್ಕೆ ಪುನರಾವರ್ತಿಯಾಗಿ ಮೀಸಲುಗೊಳಿಸುವುದಕ್ಕೆ ಕಾನೂನು ಅವಕಾಶ ಮಾಡಿಕೊಡುವುದಿಲ್ಲ ಎಂದು ನಿವೇದಿಸಿರುವರು.

15. ಈ ವಾದಕ್ಕೆ ಅವಲಂಬನೆಯಾಗಿ ಮಾನ್ಯ ಹಿರಿಯ ನ್ಯಾಯವಾದಿಗಳು, ನಿಯಮಗಳಲ್ಲಿನ 13- ಎ ( 2) ನೇ ನಿಯಮದ ಅಂಶವನ್ನು ಮತ್ತು ಅಂಥ ಪ್ರವರ್ಗದ ಸಂಬಂಧದಲ್ಲಿ ಆವರ್ತನ ಸರದಿಯೂ ಪೂರ್ಣಗಳ್ಳುವವರೆಗೂ ಉತ್ತರಾವಧಿಗೆ ಅದೇ ಪ್ರವರ್ಗವನ್ನು ಪುರಸ್ಕರಿಸತಕ್ಕದ್ದಲ್ಲ ಹಿಂದಿನ ಅವಧಿಯಲ್ಲೂ ಸಾಮಾನ್ಯ ಮಹಿಳೆ ಪ್ರವರ್ಗಕ್ಕೆ ಮೀಸಲಿಟ್ಟಿರುವ ಅಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿರುವರು.ಆದುದರಿಂದಲೇ ಈ ಎಲ್ಲಾ ಅಂಶಗಳಿಂದ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆಯ ಪ್ರವರ್ಗಕ್ಕೆ ಇಟ್ಟಿರುವುದು ಕಾನೂನು ಬಾಹಿರ ಅಂಶವಾಗಿದೆ.ಆದಾಗ್ಯೂ, ಈ ನ್ಯಾಯಾಲಯವು ವಜಾಗೊಳ್ಳಲು ಅರ್ಹವಾದದಿನಾಂಕ: 13.03.2017 ರ ಅಧಿಸೂಚನೆಯನ್ನು ವಜಾಗೊಳಿಸತಕ್ಕದ್ದು.ತರುವಾಯದಿನಾಂಕ: 15.03.2017 ರ ಚುನಾವಣಾ ನೋಟಿಸಿನಲ್ಲಿದಿನಾಂಕ: 24.03.2017 ರಂದು ನಿಗದಿಗೊಳಿಸಿದ ಚುನಾವಣೆಯನ್ನು ಈ ನ್ಯಾಯಾಲಯವು ವಜಾಗೊಳಿಸಬೇಕೆಂದು ನಿವೇದಿಸಿರುವರು.

16. ಮತ್ತೊಂದು ಕಡೆಯಲ್ಲಿ, ಶ್ರೀ ಶ್ರೀನಿಧಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಈ ನ್ಯಾಯಾಲಯದ ಮುಂದೆ ಈ ಮುಂದಿನ ವಾದಾಂಶಗಳನ್ನು ನಿವೇದಿಸಿರುವರು:

ಮೊದಲು, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ನಿರ್ದಿಷ್ಟವಾಗಿ ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು ಮತ್ತು ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಮೀಸಲುಗೊಳಿಸುವ ವ್ಯವಹರಣೆಯನ್ನು 42 ( 2-ಎ) ಪ್ರಕರಣವು ನಿರ್ವಹಿಸುತ್ತದೆ.ಅದು " ಸಾಮಾನ್ಯ ಮಹಿಳೆ " ಪ್ರವರ್ಗವನ್ನು ನಿರ್ವಹಿಸುವುದಿಲ್ಲ.

ಎರಡನೆಯದಾಗಿ, ನಿಯಮಗಳಲ್ಲಿನ 13 ನೇ ನಿಯಮವು ಕೆಲವು ಕೋಷ್ಟಕಗಳನ್ನು ಒಳಗೊಂಡಿದೆ ಎಂದರೆ, ಕೋಷ್ಟಕ -1 ರಲ್ಲಿ-ನಗರಸಭೆಗಳಲ್ಲಿನ ಪದಗಳ ಮೀಸಲಾತಿಯನ್ನು, ಕೋಷ್ಟಕ -2 ರಲ್ಲಿ ಪುರಸಭೆಯ ಪದಗಳ ಮೀಸಲಾತಿಯನ್ನು ಮತ್ತು ಕೋಷ್ಟಕ -3 ರಲ್ಲಿ-ಪಟ್ಟಣ ಪಂಚಾಯಿತಿ ಪದಗಳ ಮೀಸಲಾತಿಯನ್ನು ವಿವರಿಸಲಾಗಿದೆ.ಕೋಷ್ಟಕ -2 ಕ್ಕೆ ಅನುಸಾರವಾಗಿ ಇಪ್ಪತ್ತೆಂಟು ಅಧ್ಯಕ್ಷ ಸ್ಥಾನಗಳನ್ನು ಸಾಮಾನ್ಯ ಮಹಿಳೆಗಾಗಿ ಮೀಸಲುಗೊಳಿಸಲಾಗಿದೆ.ಇಪ್ಪತ್ತೊಂಬತ್ತು ಅಧ್ಯಕ್ಷ ಎ ಸ್ಥಾನಗಳನ್ನು ಸಾಮಾನ್ಯ ಪ್ರವರ್ಗಕ್ಕೆ ಮೀಸಲುಗೊಳಿಸಲಾಗಿದೆ.ಆದರೆ, ರಾಜ್ಯದಲ್ಲಿ ಒಟ್ಟು 113 ಪುರಸಭೆಗಳಿದ್ದು, 57 ಪುರಸಭೆಗಳ ಅಧ್ಯಕ್ಷ ಸ್ಥಾನವನ್ನು ಮೀಸಲುಗೊಳಿಸಲಾಗಿದೆ ಇದರಲ್ಲಿ ಸಾಮಾನ್ಯ ಮಹಿಳೆ ಪ್ರವರ್ಗವು ಒಳಗೊಂಡಿದೆ.ದಿನಾಂಕ 05.02.2016 ರ ಸರ್ಕಾರಿ ಆದೇಶದಲ್ಲಿ ಸಾಮಾನ್ಯ ಪ್ರವರ್ಗಕ್ಕಾಗಿ ಅಥವಾ ಸಾಮಾನ್ಯ ಮಹಿಳೆಗಾಗಿ ದೊಡ್ಡ ಪ್ರವರ್ಗದಿಂದ ಪುನರಾವೃತ್ತಿಯಾಗದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಎಂಬ ಷರತ್ತಿನೊಂದಿಗೆ ಸಾಮಾನ್ಯ ಮತ್ತು ಸಾಮಾನ್ಯ ಮಹಿಳೆ ಹೊರತುಪಡಿಸಿ ಹಿಂದಿನ ಏಳು ಅವಧಿಯಲ್ಲಿನ ಮೀಸಲುಗೊಳಿಸಿದ ಸ್ಥಾನವನ್ನು ಉಲ್ಲೇಖಿಸಿದೆ.ಆದುದರಿಂದ " ಸಾಧ್ಯವಾಗುವಷ್ಟರ ಮಟ್ಟಿಗೆ " ಆವರ್ತನ ಸರದಿಯನ್ನು ಅನುಸರಿಸಬೇಕಾಗುತ್ತದೆ.ಅಂದರೆ ಈ ಮೊಕದ್ದಮೆಯಲ್ಲಿ ಪಕ್ಕಾ ಅವಧಿಯನ್ನು ಅನುಸರಿಸದಿರುವುದು ಕಂಡುಬರುತ್ತದೆ.ಅಲ್ಲದೆ, ' ಸಾಮಾನ್ಯ ' ಮತ್ತು ' ಸಾಮಾನ್ಯ ಮಹಿಳೆ ' ಪ್ರವರ್ಗಗಳ ಸಂಬಂಧದಲ್ಲಿ ಸಾಧ್ಯವಾದಷ್ಟು ಅದು ಪುನರಾವೃತ್ತಿಯಾಗಿದೆ.ಆದರೂ, ' ಸಾಮಾನ್ಯ ಮಹಿಳೆ ' ಪ್ರವರ್ಗ ಪುನರಾವೃತ್ತಿಯಾಗದಿರುವುದನ್ನು ಪ್ರತಿಷೇಧಿಸಿರುವುದಿಲ್ಲ.ಈ ವಾದಕ್ಕೆ ಅವಲ ಂ ಬನೆಯಾಗಿ, ಮಾನ್ಯ ನ್ಯಾಯವಾದಿಗಳು, ರವಿ ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - ರಿಟ್ ಅರ್ಜಿ ಸಂ .102383/2016, ದಿನಾಂಕ 16.03.2016, ಇವರಿಗೆ ಸಂಬಂಧಿಸಿದ ಮೊಕದ್ದಮೆಯ ನಿರ್ಣಯವನ್ನು ಉಲ್ಲೇಖಿಸಿರುವರು.

ಮೂರನೆಯದಾಗಿ, ನಿಯಮಗಳಲ್ಲಿನ 13- ಎ ( 2) ನಿಯಮದಲ್ಲಿ ಹೇಳಿರುವ ವಿಷಯವು ಹೀಗಿದೆ " ಅಂಥ ಪ್ರವರ್ಗದ ಸಂಬಂಧದಲ್ಲಿ ಆವರ್ತನ ಸರದಿ ಪೂರ್ಣಗೊಳ್ಳುವವರೆಗೂ ಉತ್ತರಾವಧಿಯಲ್ಲಿ ಸಾಮಾನ್ಯ-ಮಹಿಳೆಗೆ ಹಂಚಿಕೆ ಮಾಡತಕ್ಕದ್ದಲ್ಲ. "

17. ಮಾನ್ಯ ನ್ಯಾಯವಾದಿಗಳು " ಸಾಧ್ಯವಾಗುವಷ್ಟರ ಮಟ್ಟಿಗೆ ' ಎಂಬ ಪದಗಳು ಹಾಗೂ " ಉತ್ತರಾವಧಿ " ಪದಗಳಿಗೆ ಹೆಚ್ಚಿನ ಒತ್ತನ್ನು ನೀಡಿರುವರು.ಅದಕ್ಕನುಸಾರವಾಗಿ ಅವರು ನಿಯಮಗಳ 13 ( 2) ನಿಯಮದಲ್ಲಿ ಸಾಮಾನ್ಯ-ಮಹಿಳೆಗೆ ಸಂಬಂಧಿಸಿದ ಪ್ರತಿಷೇಧವನ್ನು ಮಾತ್ರ ಒಳಗೊಂಡಿದೆ, ಸದರಿ ಪ್ರವರ್ಗವು ಎರಡು ನಿರಂತರ ಅವಧಿಗಳಿಗೆ ಮುಂದುವರೆಯಲು ಅನ್ವಯವಾಗುವುದಿಲ್ಲ ಎಂಬುದು ಇದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.ಆದುದರಿಂದ ಕಾನೂನು ಸದರಿ ಪ್ರವರ್ಗದ ಪುನರಾವೃತ್ತಿಯನ್ನು ಅನುಮತಿಸುತ್ತದೆ ಆದರೆ ಎರಡು ನಿರಂತರ ಅವಧಿಗೆ ಮುಂದುವರೆಯಲು ಅನುಮತಿಸುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ, ಅಧ್ಯಕ್ಷ ಸ್ಥಾನವನ್ನು ಆರನೇ ಅವಧಿಗಾಗಿ ಮೀಸಲಾಗಿದೆಯೇ ಹೊರತು ಏಳನೇ ಅವಧಿಗಾಗಿ ಮೀಸಲುಗೊಂಡಿರುವುದಿಲ್ಲ.ಪ್ರಸ್ತುತ ಅವಧಿ ಎಂಟನೇ ಅವಧಿಯಾಗಿದೆ, ಪ್ರತ್ಯರ್ಜಿದಾರರು ಅಧ್ಯಕ್ಷ ಸ್ಥಾನವನ್ನು ಪ್ರಸ್ತುತ ಅವಧಿಗಾಗಿ ಸಾಮಾನ್ಯ ಮಹಿಳೆ ಪವರ್ಗಕ್ಕಾಗಿ ಮುಕ್ತವಾಗಿ ಇಟ್ಟಿದ್ದಾರೆ.ಆದುದರಿಂದಲೇ, ನಿಯಮಗಳ 13 ಎ(2) ನೇ ನಿಯಮಗಳಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ಮೀಸಲಾತಿಯು ಉಲ್ಲಂಘಿಸಿರುವುದಿಲ್ಲ.ಆದ್ದರಿಂದ ಮಾನ್ಯ ನ್ಯಾಯವಾದಿಗಳು 13.03.2017 ರ ಅಧಿಸೂಚನೆಯನ್ನು ಮತ್ತು ದಿನಾಂಕ 15.03.2017 ರ ಚುನಾವಣಾ ನೋಟಿಸು ಎರಡನ್ನು ಬಲವಾಗಿ ಸಮರ್ಥಿಸಿರುವರು.

18. ಮಾನ್ಯ ಹಿರಿಯ ನ್ಯಾಯವಾದಿಯಾದ ಶ್ರೀ ಲಕ್ಷ್ಮೀನಾರಾಯಣ ಅವರು, ನಿರ್ದಿಷ್ಟ ಮೀಸಲು ಪ್ರವರ್ಗಗಳಿಗಾಗಿ ಸ್ಥಾನಗಳು ಮೀಸಲಾತಿಯನ್ನು ಸಂಭಾವ್ಯವಾಗಿ ತಪ್ಪನ್ನು ಎಸಗಲಾಗಿದೆ ಎಂದು ಹೆಚ್ಚು ಒತ್ತು ನೀಡಿ ವಾದಿಸಿರುವರು.ಪ್ರಸ್ತುತ ಚ ಮೊಕದ್ದಮೆಯಲ್ಲಿ, ಪಟ್ಟಣ ಪುರಸಭೆಯ ಅಧ್ಯಕ್ಷ ಸ್ಥಾನಕ್ಕಾಗಿ ಸಾಮಾನ್ಯ ಮಹಿಳೆ ಪ್ರವರ್ಗ ಪುನರಾವೃತ್ತಿಗೊಂಡಿರುವ ವಿವಾದದಲ್ಲಿ ಆವರ್ತನ ಸರದಿ ಪೂರ್ಣಗೊಂಡಿದೆಯೇ ಅಥವಾ ಪೂರ್ಣಗೊಂಡಿಲ್ಲವೇ?ಮುಂಚೆಯೇ ಈ ವಿವಾದದಲ್ಲಿ ತಪ್ಪನ್ನು ಎಸಗಿರುವರು ಎಂದು ಮಾನ್ಯ ಹಿರಿಯ ನ್ಯಾಯವಾದಿಗಳು ಆವರ್ತನ ಸರದಿ ಪೂರ್ಣಗೊಳ್ಳದ ಹೊರತು ಸದರಿ ಪ್ರವರ್ಗವು ಪುನರಾವೃತ್ತಿಗೊಳ್ಳಬಾರದು ಎಂದು ತುಂಬಾ ಭಾವಾವೇಶದಿಂದ ವಾದವನ್ನು ನಿವೇದಿಸಿರುವರು, ದಿನಾಂಕ 05.02.2016 ರ ಸರ್ಕಾರಿ ಆದೇಶ ಮತ್ತು ನಿಯಮಗಳು 13 ಎ ( 2) ನಿಯಮವು ಈ ಎರಡು ಸದರಿ ವಾದವನ್ನು ಹುಸಿಗೊಳಿಸಿದೆ.ಸರ್ಕಾರಿ ಆದೇಶ ಹಿಂದಿನ ಏಳು ಅವಧಿಗಳಿಗಾಗಿ ಮೀಸಲಾತಿಯನ್ನು ಉಲ್ಲೇಖಿಸುವುದರೊಂದಿಗೆ ಮೀಸಲು ಸ್ಥಾನಗಳು

ಪುನರಾವೃತ್ತಿಗೊಳ್ಳುವ ಸಂಬಂಧದಲ್ಲಿ ಪ್ರತಿಷೇಧ ಒಳಗೊಂಡಿರುವುದರಿಂದ ಸದರಿ ಪ್ರವರ್ಗವನ್ನು ಉದ್ಧೃತಗೊಳಿಸಿದಾಗ ಸಾಮಾನ್ಯ ಮಹಿಳೆ ಪ್ರವರ್ಗದ ಪರವಾಗಿ ವಿನಾಯಿತಿಗೊಳಿಸಲಾಗಿದೆ ಎಂದು ಸ್ಪಷ್ಟವಾಗಿ ಸರ್ಕಾರಿ ಆದೇಶದಲ್ಲಿ ಹೇಳಲಾಗಿದೆ.

ಆದೇಶದ 7 ನೇ ಬಾಬಿನಲ್ಲಿ ಹೇಳಲಾದ ಅಂಶ ಈ ಕೆಳಗಿನಂತಿದೆ:

"(vii) ಹಿಂದಿನ ಏಳು ಅವಧಿಗಳಲ್ಲಿ ಮೀಸಲಾತಿಯನ್ನು ಉಲ್ಲೇ ಖಿ ಸು ವುದ ರೊ ಂ ದಿಗೆ ವಿಸ ಲಾ ಸ್ಥಾನ ವು ಅ ಪುನರಾವೃತ್ತಿಗೊಳ್ಳುವುದಿಲ್ಲ ಎಂಬುದನ್ನು ಸಾಮಾನ್ಯ ಮತ್ತು ಸಾಮಾನ್ಯ ಮಹಿಳೆ ಪ್ರವರ್ಗವನ್ನು ಹೊರತುಪಡಿಸಿ ಇತರ ಪ್ರವರ್ಗದ ಸಂಬಂಧದಲ್ಲಿ ಸಾಧ್ಯವಾಗುವಷ್ಟರಮಟ್ಟಿಗೆ ಆವರ್ತನ ಸರದಿಯನ್ನು ಖಚಿತಪಡಿಸತಕ್ಕದ್ದು."

(ಒತ್ತು ನೀಡಲಾಗಿದೆ)

ಆದುದರಿಂದ, ಹಿಂದಿನ ಏಳು ಅವಧಿಯಲ್ಲಿ ಉಲ್ಲೇಖಿಸಿದ ಮೀಸಲಾತಿಯಲ್ಲಿ ಮೀಸಲುಗೊಂಡ ಸ್ಥಾನಗಳು ಪುನರಾವೃತ್ತಿಯಾಗಿರುವುದಿಲ್ಲ, ಇದು ಸಾಮಾನ್ಯ ಮಹಿಳೆ ಪ್ರವರ್ಗಕ್ಕೆ ಅನ್ವಯವಾಗುವುದಿಲ್ಲ.ಆದುದರಿಂದಲೇ, ಸಾಮಾನ್ಯ ಮಹಿಳೆ ಪ್ರವರ್ಗವು ನಿರ್ದಿಷ್ಟವಾಗಿ ಪುನಾರಾವೃತ್ತಿಯಾಗುತ್ತದೆ.

19. ಅಲ್ಲದೆ, ನಿಯಮಗಳ 13 ಎ ( 2 ನೇ ನಿಯಮಕ್ಕೆ ಅನುಸಾರವಾಗಿ, ಸಾಧ್ಯವಾಗುವಷ್ಟರಮಟ್ಟಿಗೆ ನಿರಂತರ ಎರಡು ಉತ್ತರಾವಧಿಗೆ, ಆವರ್ತನ ಸರದಿ ಪೂರ್ಣಗೊಳ್ಳುವವರೆಗೂ ಹಿಂದಿನ ಅವಧಿಯಲ್ಲಿನ ಸದರಿ ಪವರ್ಗದ ಸಂಬಂಧದಲ್ಲಿ ಅ ಮೀಸಲುಗೊಳಿಸಿದ ಆ ಯಾವುದೇ ಪದವನ್ನು ಸಾಮಾನ್ಯ-ಮಹಿಳೆ ಪ್ರವರ್ಗಕ್ಕೆ ಪುರಸ್ಕರಿಸಲು ಸಾಧ್ಯವಿಲ್ಲ.ಮೊದಲು, " ಸಾಧ್ಯವಾಗುವಷ್ಟರ ಮಟ್ಟಿಗೆ " ಪದವನ್ನು ಅದರ ಬಳಕೆಯನ್ನು ನಿರುಪಾಧಿಕವಾಗಿ ನಿಷೇದಿಸಲು ಸಾಧ್ಯವಾಗುವುದಿಲ್ಲ.ಎರಡನೆಯದಾಗಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕಾಗಿ ಎರಡು ನಿರಂತರ ಅವಧಿಗೆ ಸಾಮಾನ್ಯ-ಮಹಿಳೆ ಪ್ರವರ್ಗವನ್ನು ನಿಷೇಧಿಸಲಾಗಿದೆ.ಆದಾಗ್ಯೂ, ಪ್ರಸ್ತುತ ಮೊಕದ್ದಮೆಯಲ್ಲಿ, ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ-ಮಹಿಳೆ ಪ್ರವರ್ಗಕ್ಕೆ ಒಂದು ಅವಧಿಯ ಅಂತರದಲ್ಲಿ ಮೀಸಲಿರಿಸಲಾಗಿದೆ ಅಂದರೆ ಏಳನೇ ಅವಧಿಗೆ ಸಹಾ ಸಾಮಾನ್ಯ ಮಹಿಳೆಗೆ ಮೀಸಲಾಗಿದೆ.ಆದುದರಿಂದ, ಅಧ್ಯಕ್ಷ ಸ್ಥಾನವನ್ನು ನಿರಂತರ ಅವಧಿಯಲ್ಲಿ ಸಾಮಾನ್ಯ-ಮಹಿಳೆ ಪ್ರವರ್ಗಕ್ಕಾಗಿ ಮೀಸಲುಗೊಳಿಸಲು ಬರುವುದಿಲ್ಲ.ಇದರಿಂದ ಸದರಿ ಪ್ರವರ್ಗವನ್ನು ಎಂಟನೇ ಅವಧಿಯಲ್ಲಿ ಸದರಿ ಸ್ಥಾನಕ್ಕೆ ಪುನಾರಾವೃತ್ತಿಗೊಳಿಸುವುದು ಕಾನೂನುಸಮ್ಮತವಾಗಿ ನಿರಾಪಾಧಿಕವಾಗಿದೆ.

ಈ ನ್ಯಾಯಾಲಯ ರವಿ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ, ಮೊಕದ್ದಮೆಯಲ್ಲಿ ಸರ್ಕಾರವು ಉತ್ತರಾವಧಿಯಲ್ಲಿ ಪುನರಾವೃತ್ತಿಯಾಗದಂತೆ ' ಸಾಮಾನ್ಯ 9 ಮತ್ತು ' ಸಾಮಾನ್ಯ ಮಹಿಳೆ ' ಪ್ರವರ್ಗವನ್ನು ಪುನರಾವೃತ್ತಿಗೊಳಿಸುವುದು ಎಂದು ಸ್ಪಷ್ಟವಾಗಿ ಈ ನ್ಯಾಯಾಲಯವು ತೀರ್ಮಾನಿಸಿದೆ.ಆದುದರಿಂದ, ಶ್ರೀ ಶ್ರೀನಿಧಿಯವರು ವಾದಿಸಿರುವ ವಾದಾಂಶವನ್ನು ಸ್ವೀಕರಿಸಲು ಅರ್ಹವಾಗಿದೆ.

20. ಶ್ರೀ ಲಕ್ಷ್ಮೀನಾರಾಯಣ ಮಾನ್ಯ ಹಿರಿಯ ನ್ಯಾಯವಾದಿಗಳು ಮೊಕದ್ದಮೆಗಳ ವಾದ ಸರಣಿಯಲ್ಲಿ ಪ್ರಾರ್ಥಿಸಿರುವುದನ್ನು ಸಹ ಈ ನ್ಯಾಯಾಲಯವು, ಒಂದು ಅಧಿಸೂಚನೆಯಿಂದ ಇನ್ನೊಂದು ಅಧಿಸೂಚನೆಯಲ್ಲಿ ಪ್ರವರ್ಗವನ್ನು ಬದಲಾಯಿಸುವ ಮುಂಚೆ ಪ್ರತ್ಯರ್ಜಿದಾರರ ಕರಡು ಅಧಿಸೂಚನೆಯನ್ನು ಹೊರಡಿಸಿ ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಿದ ನಂತರ ಮಾತ್ರವೇ ಪ್ರತ್ಯರ್ಜಿದಾರರು ಚುನಾವಣೆ ನಡೆಸುವುದಕ್ಕಾಗಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸಾಧ್ಯ ಎಂಬುದು ತನ್ನ ಅಭಿಪ್ರಾಯೋಕ್ತಿಯನ್ನು ಸ್ಪಷ್ಟಪಡಿಸುತ್ತದೆ.ಮಾನ್ಯ ಹಿರಿಯ ನ್ಯಾಯವಾದಿಗಳು ತಮ್ಮ ವಾದಕ್ಕೆ ಅವಲಂಬನೆಯಾಗಿ ರವಿ ಮತ್ತು ಇತರರು (ಮೇಲಿನ) ಸೋಮಶೇಖರ್ ಎಸ್ ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯ - ರಿಟ್ ಅರ್ಜಿ ಸಂ.15881-883/2016, ದಿನಾಂಕ 13.04.2016, ಈ ನ್ಯಾಯಾಲಯವು ನಿರ್ಣಯಿಸಿದ) ಮೊಕದ್ದಮೆ ಮತ್ತು ಕಲ್ಲಪ್ಪ ವಿರುದ್ಧ ಕರ್ನಾಟಕ ರಾಜ್ಯ - ರಿಟ್ ಅರ್ಜಿ ಸಂ .202075/2016, ದಿನಾಂಕ 02.06.2016, ಮೊಕದ್ದಮೆಯಲ್ಲಿನ ತೀರ್ಪನ್ನು ನೀಡಿರುವರು.

21. ಮತ್ತೊಂದು ಕಡೆಯಲ್ಲಿ, ಶ್ರೀ ಶ್ರೀನಿಧಿಯವರು, ಮಾನ್ಯ ಹಿರಿಯ ನ್ಯಾಯವಾದಿಗಳು ಉಲ್ಲೇಖಿಸಿದ ಮೊಕದ್ದಮೆಗಳನ್ನು ಈ ಸಂದರ್ಭದಲ್ಲಿ ಅವಲ ಂ ಬನೆಯಾಗುವುದಿಲ್ಲವೆಂದು ನಿವೇದಿಸಿರುವರು.ಈ

ನ್ಯಾಯಾಲಯ ಕರಡು ಅಧಿಸೂಚನೆ ಹೊರಡಿಸುವುದಕ್ಕಾಗಿ ಯಾವುದೇ ಮಾರ್ಗಸೂಚಿ ಅಥವಾ ಯಾವುದೇ ನಿಯಮಿಸಿದ ಅಗತ್ಯತೆಯನ್ನು ಮಂಡಿಸುವುದಕ್ಕಾಗಿ ಮತ್ತು ಸಾರ್ವಜನಿಕ ಆಕ್ಷೇಪಣೆಗಾಗಿ ಕರೆಯುವುದಕ್ಕಾಗಿ ಮತ್ತು ಅಂತಿಮ ಅಧಿಸೂಚನೆಯನ್ನು ಜಾರಿ ಮಾಡುವುದಕ್ಕಾಗಿ ಸಾಧ್ಯವಾಗುವುದಿಲ್ಲ.ಮಾನ್ಯ ನ್ಯಾಯವಾದಿಗಳಿಗೆ ಅನುಸಾರವಾಗಿ, ಎರಡೂ ಮೊಕದ್ದಮೆಯಲ್ಲಿ, ಈ ನ್ಯಾಯಾಲಯ (ಮೇಲಿನ) ರವಿ ಮೊಕದ್ದಮೆಯ ಮತ್ತು ಮಂಜುನಾಥ್ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - ರಿಟ್ ಅರ್ಜಿ ಸಂ .102319/2016, ದಿನಾಂಕ 16.03.2016, ಈ ನ್ಯಾಯಾಲಯ), ಮತ್ತು ಡಿ.ಕೆ. ತಿಮ್ಮಪ್ಪ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - ರಿಟ್ ಅರ್ಜಿ ಸಂ .12256/2016, ದಿನಾಂಕ 09.03.2016, ಮೊಕದ್ದಮೆಯನ್ನು ಆಧಾರವಾಗಿ ತೆಗೆದುಕೊಳ್ಳಬೇಕೆಂದು ನಿವೇದಿಸಿರುವರು. ಮಾನ್ಯ ನ್ಯಾಯವಾದಿಗಳು ಈ ಮೊಕದ್ದಮೆಗೆ ಅನುಸಾರವಾಗಿ, ಮಂಜುನಾಥ (ಮೇಲಿನ), ಡಿ.ಕೆ. ತಿಮ್ಮಪ್ಪ (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಮುಂದಿನ ಅಧಿಸೂಚನೆಯಲ್ಲಿ ಪ್ರವರ್ಗಗಳ ಬದಲಾವಣೆಗಾಗಿ ಯಾವುದೇ ಮಾರ್ಗಸೂಚಿಗಳನ್ನು ನಿಯಮಿಸಿದಂತೆ ಪ್ರಸ್ತುತ ಮೊಕದ್ದಮೆಯಲ್ಲಿ ಅಧಿಸೂಚನೆಗೆ ಮಾರ್ಗಸೂಚಿಯನ್ನು ನಿಯಮಿಸಬೇಕೆಂದು ನಿವೇದಿಸಿರುವರು.ಮಾನ್ಯ ನ್ಯಾಯವಾದಿಗಳು ವಾಸ್ತವವಾಗಿ, ಎಸ್.ಟಿ. ಕೃಷ್ಣಗೌಡ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - ರಿಟ್ ಅರ್ಜಿ ಸಂ .57303/2015, ದಿನಾಂಕ 18.01.2016, (ಇತರ ಸಂವಾದಿ ವಿಷಯಗಳನ್ನು ಈ ನ್ಯಾಯಾಲಯವು ದಿನಾಂಕ 18_01_206 ರಂದು ನಿರ್ಣಯಿಸಿದೆ) ಮೊಕದ್ದಮೆಯಲ್ಲಿ ನಿರ್ಣಯಿಸಿದ ತೀರ್ಪನ್ನು ಅವಲಂಬಿಸಿ ಸದರಿ ಮೊಕದ್ದಮೆಯನ್ನು ತೀರ್ಮಾನಿಸಬೇಕೆಂದು ಪ್ರಾರ್ಥಿಸಿರುವರು.ಈ ನ್ಯಾಯಾಲಯವು, ಚೆನ್ನಿಗಪ್ಪ ಮತ್ತು ಮತ್ತೊಬ್ಬರು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - ಐಎಲ್ಆರ್ 2000 ಕೆಎಆರ್ 2941, ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ವಿಭಾಗೀಯ ಪೀಠವು ರಾಜ್ಯ ಸರ್ಕಾರಕ್ಕೆ ಕರಡು ಅಧಿಸೂಚನೆಯನ್ನು ಹೊರಡಿಸುವುದಕ್ಕಾಗಿ ನಿಯಮಗಳನ್ನು ತಿದ್ದುಪಡಿಮಾಡುವುದಕ್ಕಾಗಿ, ಸಾರ್ವಜನಿಕರಿಗೆ ಅವಕಾಶವನ್ನು ಒದಗಿಸುವುದಕ್ಕಾಗಿ, ಮತ್ತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸುವುದಕ್ಕಾಗಿ ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸಲಹೆಗಳನ್ನು ಶಿಫಾರಸ್ಸುಗಳನ್ನು ಮಾಡಿರುವುದನ್ನು ಈ ನ್ಯಾಯಾಲಯವು ಸ್ಪಷ್ಟವಾಗಿ ತನ್ನ ಗಮನಕ್ಕೆ ತಂದುಕೊಂಡಿದೆ.ಆದಾಗ್ಯೂ, ಸದರಿ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರವು ಇದುವರೆಗೂ ಕಾರ್ಯಗತಗೊಳಿಸಿರುವುದಿಲ್ಲ ಎಂಬ ಅಂಶವು ಕಂಡುಬರುತ್ತದೆ.ಆದುದರಿಂದ, ಪ್ರಸ್ತುತದಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಗಳಿಗಾಗಿ ಮುಂಚಿನ ಪ್ರವರ್ಗವನ್ನು ಬದಲಾಯಿಸುವುದಕ್ಕಾಗಿ ತರುವಾಯ ಅಧಿಸೂಚನೆಯ ಮೂಲಕ, ಕರಡು ಅಧಿಸೂಚನೆಯನ್ನು ಪ್ರಕಟಿಸಲು ಅಗತ್ಯಪಡಿಸಲು, ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸುವುದಕ್ಕಾಗಿ ಮತ್ತು ತದನಂತರದಲ್ಲಿ ಮಾತ್ರವೇ ಅಂತಿಮ ಅಧಿಸೂಚನೆಯನ್ನು ಹೊರಡಿಸಬೇಕೆಂದು ಕಾನೂನು ಸಮ್ಮತವಾಗಿ ಅಗತ್ಯಪಡಿಸಲು ಸಾಧ್ಯವಾಗುವುದಿಲ್ಲ.

22. ಕರಡು ಅಧಿಸೂಚನೆಗಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸುವುದು ಸಾಧ್ಯವಾಗುವಷ್ಟರ ಮಟ್ಟಿಗೆ ಅಗತ್ಯವಿದೆ ಮತ್ತು ತದನಂತರದಲ್ಲಿ ಮಾತ್ರವೇ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸಾಧ್ಯವಾಗುತ್ತದೆ.ಅದನ್ನು ನೆರವೇರಿಸುವ ಸಂಬಂಧದಲ್ಲಿ ಕೆಲವು ಕಾನೂನು ಗೊಂದಲಗಳು ಕಂಡುಬರುತ್ತದೆ.ರವಿ (ಮೇಲಿನ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯ ಪ್ರವರ್ಗವನ್ನು ಬದಲಾಯಿಸಿದಾಗ ಒಂದು ಅಧಿಸೂಚನೆಯಿಂದ ಮತ್ತೊಂದು ಅಧಿಸೂಚನೆಯಲ್ಲಿ ಅನುಸರಿಸಬೇಕಾದ ಯಾವುದೇ ಮಾರ್ಗಸೂಚಿಯನ್ನು ಮಂಡಿಸಿರುವುದಿಲ್ಲ.ಅಲ್ಲದೇ, ಈ ನ್ಯಾಯಾಲಯ ಸೋಮಶೇಖರ್ (ಮೇಅನ) ಮೊಕದ್ದಮೆಯಲ್ಲಿ ಮತ್ತು ಡಿ.ಕೆ. ತಿಮ್ಮಪ್ಪ (ಮೇಅನ) ಮೊಕದ್ದಮೆಯನ್ನು ಆಧರಿಸಿ ನಿರ್ಣಯಿಸಿದೆ.ಮೇಲಿನ ಎರಡೂ ಮೊಕದ್ದಮೆಗಳಲ್ಲೂ ಪ್ರವರ್ಗಗಳ ಬದಲಾವಣೆಗಾಗಿ ಒಂದು ಅಧಿಸೂಚನೆಯಿಂದ ಮತ್ತೊಂದು ಅಧಿಸೂಚನೆಯಲ್ಲಿ ಹೊರಡಿಸಲು ಯಾವುದೇ ಮಾರ್ಗಸೂಚಿಯನ್ನು ನ್ಯಾಯಾಲಯವು ಹೇಳಿರುವುದಿಲ್ಲ.ಅದರಂತೆಯೇ ಕಲ್ಲಪ್ಪ (ಮೇಲಿನ) ಮೊಕದ್ದಮೆಯಲ್ಲಿ ಸೋಮಶೇಖರ್ (ಮೇಅನ), ರವಿ (ಮೇಲಿನ) ಮೊಕದ್ದಮೆಯನ್ನು ನ್ಯಾಯಾಲಯವು ಯಾವುದೇ ಅಂಥ ಮಾರ್ಗಸೂಚನೆಯನ್ನು ನಿಯಮಿಸಿರುವುದಿಲ್ಲ.ಎಂದರೆ, ಈ ಮೂರು ಮೊಕದ್ದಮೆಗಳು ಕುರುಡ ಕುರಡನ್ನೇ ಅನುಸರಿಸಿದೆ ಎಂಬ ಮಾತಿನಂತೆ ನಿದರ್ಶನ ಯೋಗ್ಯ ಉದಾಹರಣೆಯಾಗಿ ಕಂಡುಬರುತ್ತದೆ.

23. ಈ ನ್ಯಾಯಾಲಯ ಎಸ್.ಟಿ. ಕೃಷ್ಣಗೌಡ (ಮೇಲಿನ) ಮೊಕದ್ದಮೆಯನ್ನು ಮಾತ್ರವೇ, ಈ ನ್ಯಾಯಾಲಯದ ಮಾನ್ಯ ವಿಭಾಗೀಯ ಪೀಠದಲ್ಲಿನ ಚೆನ್ನಿಗಪ್ಪ (ಮೇಲಿನ) ಮೊಕದ್ದಮೆಯ ವಾಸ್ತವಾಂಶಗಳನ್ನು ಗಮನಕ್ಕೆ ತಂದುಕೊಳ್ಳುತ್ತದೆ.ಈ ಮೊಕದ್ದಮೆಗಳಲ್ಲಿ ನ್ಯಾಯಾಲಯವು ಕರಡು ಅಧಿಸೂಚನೆ ಹೊರಡಿಸಲು,

ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಸಂಬಂಧದಲ್ಲಿ ನಿರ್ದಿಷ್ಟ ನಿಯಮಗಳನ್ನು ರಚಿಸುವುದಕ್ಕಾಗಿ ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಸರ್ಕಾರಕ್ಕೆ ನೀಡಿದೆ.ಅಲ್ಲದೆ, ನ್ಯಾಯಾಲಯವು ಮಾಡಿದ ಸದರಿ ಸಲಹೆ-ಶಿಫಾರಸ್ಸುಗಳನ್ನು ಸರ್ಕಾರವು ಸ್ವೀಕರಿಸಿರುವುದಿಲ್ಲ.ಆದುದರಿಂದ, ಪ್ರಸ್ತುತದಲ್ಲಿ, ಕರಡು ಅಧಿಸೂಚನೆಯನ್ನು ಪ್ರಕಟಿಸಲು, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ಮತ್ತು ಅಂತಿಮ ಅಧಿಸೂಚನೆ ಹೊರಡಿಸುವ ಸಲುವಾಗಿ ಯಾವುದೇ ಕಾನೂನಿನ ಅಗತ್ಯತೆ ಇರುವುದಿಲ್ಲ.ಆದುದರಿಂದ, ಸದರಿ ಪ್ರಕ್ರಿಯೆಯ ಬಗ್ಗೆ ಮಾನ್ಯ ಹಿರಿಯ ನ್ಯಾಯವಾದಿಗಳು ಎತ್ತಿರುವ ವಾದಾಂಶಗಳನ್ನು ಪ್ರಸ್ತುತ ಮೊಕದ್ದಮೆಯಲ್ಲಿ ಅನುಸರಿಸಲು ಸಾಧ್ಯವಾಗುವುದಿಲ್ಲ ಮತ್ತು ಅವು ಅಸಮರ್ಥನೀಯವಾಗಿರುವುದು ಸ್ಪಷ್ಟವಾಗಿದೆ.

24. ಅರ್ಜಿದಾರರು ತಮ್ಮ ಮೊಕದ್ದಮೆಯಲ್ಲಿ ಸ್ಪಷ್ಟವಾಗಿದೆ ಮತ್ತು ಸಮರ್ಥವಾಗಿದೆ ಎಂದು ಅಭಿವ್ಯಕ್ತಿಸಿ ಈ ನ್ಯಾಯಾಲಯ ಹಸ್ತಕ್ಷೇಪ ಮಾಡಲು ಪರಿಗಣಿಸುವಂತಹ ಯಾವುದೇ ವಾಸ್ತವಾಂಶವನ್ನು ಅರ್ಜಿದಾರರು ಸಮರ್ಥವಾಗಿ, ಸ್ಪಷ್ಟವಾಗಿ ಹೇಳಿರುವುದಿಲ್ಲ ಹಾಗೂ ಚುನಾವಣೆ ನಡೆಯುವುದಕ್ಕೆ ಒಂದು ದಿನ ಮುಂಚಿತವಾಗಿಯಷ್ಟೇ ನ್ಯಾಯಾಲಯದ ಹಸ್ತಕ್ಷೇಪಣೆ ಕೋರಿರುತ್ತಾರೆ.ಈ ಕಾರಣದಿಂದ ಈ ನ್ಯಾಯಾಲಯವು ಚುನಾವಣೆ ನಡಾವಳಿಗಳಲ್ಲಿ ಪ್ರಕ್ರಿಯೆಯನ್ನು ತಡೆಯಲು, ಹಸ್ತಕ್ಷೇಪಿಸಲು, ಅಡ್ಡಿಪಡಿಸಲು ಅಥವಾ ವಿಳಂಬಗೊಳಿಸಲು ಪ್ರಸ್ತುತ ಮೊಕದ್ದಮೆಯು ಸಮರ್ಥವಾದ ವಸ್ತುವಿಷಯವನ್ನು ಹೊಂದಿಲ್ಲವೆಂಬ ಅಭಿಪ್ರಾಯವನ್ನು ಹೊಂದಿದೆ.ಆದುದರಿಂದ, ಈ ರಿಟ್ ಅರ್ಜಿಯು ಅನೂರ್ಜಿತವಾಗಿದೆ ಹಾಗೂ ಭಾರತ ಸಂವಿಧಾನದ 243 ಜೆಡ್ಜಿ ಅನುಚ್ಛೇದದಲ್ಲಿ ಒಳಗೊಂಡಿರುವ ಅಂಶದಿಂದ ಅರ್ಜಿಯನ್ನು ಸಲ್ಲಿಸಲು ಗುಣಾರ್ಹತೆಯನ್ನು ಹೊಂದಿರುವುದಿಲ್ಲ.ಈ ನ್ಯಾಯಾಲಯದ ಈ ರಿಟ್ ಅರ್ಜಿಯೂ ಅನೂರ್ಜಿತಗೊಂಡಿದೆ.ಯಾವುದೇ ಗುಣಾರ್ಹತೆಯನ್ನು ಈ ರಿಟ್ ಅರ್ಜಿ ಹೊಂದಿಲ್ಲ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ.

25. ಮೇಲಿನ ಹೇಳಲಾದ ಕಾರಣಗಳ ಪರಿಣಾಮವಾಗಿ, ಈ ನ್ಯಾಯಾಲಯಕ್ಕೆ ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ಗುಣಾರ್ಹತೆಯು ಕಂಡುಬಂದಿಲ್ಲ ಆದುದರಿಂದ ರಿಟ್ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿದೆ.